ಮೈಸೂರು ಸಂಸ್ಥಾನದ ಗರ್ಲ್ ಗೈಡ್ ಅಸೋಸಿಯೇಷನ್

1932ನೆಯ ಇಸವಿ ಮೇ ತಿಂಗಳಿಂದ 1934ನೆಯ ಇಸವಿ ಡಿಸೆಂಬರ್ ತಿಂಗಳಿನ ಆಖೈರಿನ ವರೆಗಿನ ರಿಪೋರ್ಟು

Library No R

ಬೆಂಗಳೂರು :
ಮೈಸೂರು ಸರ್ಕಾರದ ಮುದ್ರಣಾಲಯದ ಸೂಪರಿಂಟೆಂಡೆಂಟರವರಿಂದ
ಮುದ್ರಿಸಲ್ಪಟ್ಟುದು
೧೯೩೫

ಮೈಸೂರು ಸಂಸ್ಥಾನದ ಗರ್ಲ್ ಗೈಡ್ ಅಸೋಸಿಯೇಷನ್.

ಪೋಷಕರು (Patron) :—ಮೈಸೂರಿನ ಶ್ರೀಮದ್ಯುವರಾಜರವರು.

ಪ್ರಧಾನ ಗೈಡರು (Chief Guide) :— ಮೈಸೂರಿನ ಶ್ರೀಮತಿ ಯುವರಾಣಿಯವರು.

ಪ್ರಧಾನ ಕಮಿಷನರು (Chief Commissioner) :—ಲೇಡಿ ಮಿರ್ಜಾ ಇಸ್ಮಾಯಿಲ್.

ಗೌರವ ಕಾರ್ಯದರ್ಶಿಗಳು (Honorary Secretary) :—ಶ್ರೀಮತಿ ಎಸ್. ರಾಘವಾಚಾರಿಯವರು.

ಜಿಲ್ಲಾ ಕಮಿಷನರುಗಳು (District Commissioners)—

ಶ್ರೀಮತಿ ಮಿಸೆಸ್ ಕೆ. ವಿ. ಅನಂತರಾಮನ್‌ರವರು ...	ಬೆಂಗಳೂರು
ಡಾಕ್ಟರ್ ಮಿಸ್ ಗಿಲ್ಲೆಸ್ಪಿಯವರು (ತಾರೀಖು 30ನೆಯ ಏಪ್ರಿಲ್ 1934ರ ವರೆಗೆ ... ... ಮಿಸ್ ಎಲ್. ಎಂ. ಸ್ಟೋನ್ (Stone)	ಮೈಸೂರು
ಡಾಕ್ಟರ್ (ಮಿಸೆಸ್) ಹಿಲ್ (Hill) ರವರು	ತುಮಕೂರು
ಮಿಸ್ ಬೆನ್‌ಬೊರವರು (Benbow) ತಾರೀಖು 1ನೆಯ ಆಗಸ್ಟ್ 1933ರ ತನಕ ... ... ಡಾಕ್ಟರ್ (ಮಿಸ್) ನ್ಯೂಹಾವ್ (Newham) ತಾರೀಖು 7ನೆಯ ಮಾರ್ಚಿ 1934ರ ವರೆಗೆ ... ... ಡಾಕ್ಟರ್ (ಮಿಸ್) ಎ. ಸ್ಪೈಟ್ (A. Speight) ...	ಹಾಸನ ಮತ್ತು ಚಿಕ್ಕಮಗಳೂರು.
ಮಿಸ್ ಬಗ್‌ಬೀ ತಾರೀಖು 1ನೆಯ ಜನವರಿ 1934ರ ವರೆಗೆ ಮಿಸ್ ಟೇಕಾಲಾ ಹಾಫ್‌ಮ್ಯಾನ್ (Tekala Hoffman)	ಕೋಲಾರ
ಮಿಸೆಸ್ ಟಿ. ಎ. ವಿ. ರೋರವರು (T. A. V. Rowe)	ಕೋಲಾರ ಚಿನ್ನದ ಗಣಿ.

ಅಧ್ಯಕ್ಷರುಗಳು.—

ಶ್ರೀಮತಿ ಮಿಸೆಸ್	ಜೆ. ಸಿ. ಲಾಕ್‌ರವರು	...	... ಹೆಬ್ಬಾಳದ ಸೈನ್ಯ ಕ್ಷೇತ್ರ.
,,	,, ಮೆಟ್‌ಕಾಫ್‌ರವರು	...	... ಮೈಸೂರು
,,	,, ವೆಂಕಟೇಶ ಅಯ್ಯಂಗಾರ್‌ರವರು		... ಚಿಕ್ಕಮಗಳೂರು
,,	,, ಅಬ್ದುಲ್ ಖಾದರ್‌ರವರು...		... ತುಮಕೂರು
,,	,, ರಿಚರ್ಡ್ಸನ್ (Richerdson)		... ಕೋಲಾರದ ಚಿನ್ನದ ಗಣಿ.
,,	,, ಎಲ್. ಎ. ಐಯ್ಯಂಗಾರ್‌ರವರು		... ಕೋಲಾರ
,,	,, ಈಶ್ವರನ್‌ರವರು	...	... ಶಿವಮೊಗ್ಗ

ಸ್ಟೇಟ್ ಕೌನ್ಸಿಲ್.

ಬೆಂಗಳೂರು.—

ಮಿಸ್ ಟಾಜ್ ಮಿರ್ಜಾ ಇಸ್ಮಾಯಿಲ್.
ಡಾಕ್ಟರ್ (ಮಿಸ್) ಆಲ್ಬುಕರ್ಕ್.
ಶ್ರೀಮತಿ ಆರ್. ಎ. ಶ್ರೀನಿವಾಸ ಐಯ್ಯಂಗಾರ್.
ಮಿಸೆಸ್ ಎಸ್. ಜಾನಕಮ್ಮಾಳ್.
,, ಕೆ. ಲಕ್ಷ್ಮೀದೇವಿ (ಮಿಸೆಸ್ ಕೆ. ಶಂಕರನಾರಾಯಣರಾವ್).
,, ಎಸ್. ನಂಜಮ್ಮ.
,, ಅನಂತರಾಮನ್.
,, ಎಸ್. ರಾಘವಾಚಾರಿ.
ಮಿಸ್ ಕೆ. ವೈಟ್ (White).
,, ಬಿ. ಎ. ವಾಟ್ಸ್, ಬಿ.ಎ. (ಆನರ್ಸ್).
,, ಎಂ. ಎಲ್. ಬಟ್ಲರ್.
ಪ್ರಿನ್ಸಿಪಾಲ್, ಸೆಂಟ್ ಥೆರಿಸಾ ಕಾನ್ವೆಂಟ್, ಚಾಮರಾಜಪೇಟೆ.
ಮಿಸ್ ಎಂ. ಇ. ರಾಬಿನ್ಸನ್.

ಮೈಸೂರು.—

ಮಿಸೆಸ್ ಕೆ. ಡಿ. ರುಕ್ಮಿಣಿಯಮ್ಮ.
,, ಕುಪ್ಪುಸ್ವಾಮಿ.
,, ಆರ್. ಜಾನಕಮ್ಮ.
,, ಕೆ. ವಿಶಾಲಾಕ್ಷಮ್ಮ.
,, ಹೆನ್ಸ್‌ಮನ್.
ಶ್ರೀಮತಿ ಎ. ಟಿ. ಲಕ್ಷಮ್ಮ.
ಮಿಸ್ ಇಂದಿರಮ್ಮ.
ಮಿಸ್ ಎಲ್. ಎಂ. ಸ್ಟೋನ್.

ಚಿಕ್ಕಮಗಳೂರು.—

ಮಿಸ್ ಲೊಬೊ.
ಮಿಸೆಸ್ ರಾಮಸ್ವಾಮಿ.
ಮಿಸ್ ಪಿ. ಎಫ್. ಸೊರಾಬ್.

ತುಮಕೂರು.—

ಮಿಸೆಸ್ ಎಂ. ಕೆ. ಥಾಂರ್ಸ.
ಮಿಸೆಸ್ ಅಂಬಾಬಾಯಿ.
ಮಿಸ್ ಎ. ಜಿ. ಸ್ಮಿತ್.
ಮಿಸ್ ಜಡ್. ಲಾಜರಸ್.
ಮಿಸೆಸ್ ಹಿಲ್.

ಶಿವಮೊಗ್ಗ.—

ಮಿಸೆಸ್ ವೈ. ವಿ. ಶಂಕರಮ್ಮ.
,, ಕೆ. ಶ್ರೀರಂಗಮ್ಮ.
,, ಎಸ್. ರಂಗನಾಯಕಮ್ಮಾಳ್.
ಮಿಸ್ ಪುರಿ (Purry).

ಕೋಲಾರ.—

ಮಿಸ್ ಹಾಫ್‌ಮರ್ಸ.

ಕೋಲಾರ ಗೋಲ್ಡ್ ಫೀಲ್ಡ್ಸ್.—

ಮಿಸೆಸ್ ಆರ್ಥರ್ ಹಾಸ್ಕಿಂಗ್.

ಹಾಸನ.—

ಡಾಕ್ಟರ್ (ಮಿಸ್) ಎ. ಸ್ಮೈತ್.

1933–34ನೆಯ ಇಸವಿಯ ಎಕ್ಸ್‌ಕ್ಯೂಟಿವ್ ಸ್ಟೇಟ್ ಕೌನ್ಸಿಲ್ (Executive State Council).

ಲೇಡಿ ಪುಟ್ಟಣ್ಣಚೆಟ್ಟಿ.
ಮಿಸೆಸ್ ಅನಂತರಾಮರ್ಸ.
,, ಕಾಜಿಂ.
ಡಾಕ್ಟರ್ ಆಲ್ಟ್ಸರ್ಕ್.
ಮಿಸೆಸ್ ಶ್ರೀರಂಗಮ್ಮ,
,, ಇಕ್ಬಲ್ ಉನ್ನಿಸಾ ಬೇಗಂ.
,, ಸಿಂಗಾರವೇಲು.
ಮಿಸ್ ಮಿರ್ಜಾ ಇಸ್ಮಾಯಿಲ್.
ಮಿಸೆಸ್ ನಂಜಮ್ಮ.
ಮಿಸ್ ಇವಾನ್ಸ್.

1932

ಲೋಕಲ್ ಅಸೋಸಿಯೇಷನ್ನುಗಳ ಸಂಖ್ಯೆ	2
ಕಂಪೆನಿಯ ಸಂಖ್ಯೆ	9
ಫ್ಲಾಕುಗಳ ಸಂಖ್ಯೆ	1
ರೇಂಜರ್ ಕಂಪೆನಿಗಳು ...	1
ಕಮೀಷನರ ಸಂಖ್ಯೆ	2
ಸೆಕ್ರೆಟರಿಗಳ ಸಂಖ್ಯೆ ...	2
ಗೈಡರುಗಳ ,, ...	7
ಗೈಡುಗಳ ,, ...	162
ಬ್ಲೂ ಬರ್ಡ್‌ಗಳ ಸಂಖ್ಯೆ ...	30
ಲೋನ್ ಗೈಡುಗಳ ಸಂಖ್ಯೆ ...	1

1933

ಲೋಕಲ್ ಅಸೋಸಿಯೇಷನ್ನುಗಳ ಸಂಖ್ಯೆ	4
ಕಂಪನಿಗಳ ಸಂಖ್ಯೆ	16
ಫ್ಲಾಕುಗಳ ಸಂಖ್ಯೆ	5
ರೇಂಜರ್ ಕಂಪೆನಿಗಳ ಸಂಖ್ಯೆ ...	2
ಕಮೀಷನರುಗಳ ಸಂಖ್ಯೆ ...	7
ಸೆಕ್ರೆಟರಿಗಳ ,, ...	7
ಗೈಡರುಗಳ ,, ...	66
ಗೈಡುಗಳ ,, ...	364
ಬ್ಲೂ ಬರ್ಡ್‌ಗಳ ,, ...	160

1934

ಲೋಕಲ್ ಅಸೋಸಿಯೇಷನ್ನುಗಳ ಸಂಖ್ಯೆ	8
ಕಂಪೆನಿಗಳ ಸಂಖ್ಯೆ	29
ಫ್ಲಾಕುಗಳ ,, ...	11
ರೇಂಜರುಗಳ ,, ...	4
ಕಮೀಷನರುಗಳ ಸಂಖ್ಯೆ ...	7
ಸೆಕ್ರೆಟರಿಗಳ ,, ...	8
ಗೈಡರುಗಳ ,, ...	73
ಗೈಡುಗಳ ,, ...	597
ಬ್ಲೂ ಬರ್ಡ್‌ಗಳ ,, ...	292
ರೇಂಜರುಗಳ ,, ...	52

ಮೈಸೂರು ಸಂಸ್ಥಾನದ ಗರ್ಲ್ ಗೈಡ್ ಅಸೋಸಿಯೇಷನ್.

1932ನೆಯ ಇಸವಿ ಮೇ ತಿಂಗಳಿಂದ 1934ನೆಯ ಇಸವಿ ಡಿಸೆಂಬರ್ ತಿಂಗಳಿನ ಆಖೈರಿನವರಿಗಿನ ರಿಪೋರ್ಟು.

ಮೈಸೂರು ಸಂಸ್ಥಾನದಲ್ಲಿ ಗರ್ಲ್ ಗೈಡ್ ಮಂಡಳಿಯು 1932ನೆಯ ಇಸವಿ ಮೇ ತಿಂಗಳಿನಲ್ಲಿ ಸರ್ಕಾರದಿಂದ ಪೋಷಿತವಾದ ಮಂಡಳಿಯಾಗಿ ಸ್ಥಾಪಿಸಲ್ಪಟ್ಟು ಘನ ಸರ್ಕಾರದವರಿಂದ ವರ್ಷವೊಂದಕ್ಕೆ 2,800 ರೂಪಾಯಿಗಳ ಗ್ರಾಂಟನ್ನು ಪಡೆಯಿತು. ಈ ಮಂಡಲಿಯು ಪ್ರಪಂಚದ ಗರ್ಲ್ ಗೈಡ್ ಮಂಡಳಿಯೊಡನೆ ಸಮ್ಮಿಳಿತವಾಗಿದೆ. ಈ ಅಸೋಸಿಯೇಷನ್ ಸಂಬಂಧವಾದ ಕಾರ್ಯಕ್ರಮಗಳನ್ನು ಜರುಗಿಸಲು ಹನ್ನೊಂದು ಜನಗಳನ್ನೊಳಗೊಂಡ ಒಂದು ಎಕ್ಸಕ್ಯೂಟಿವ್ ಕಮಿಟಿಯನ್ನು ನೇಮಕಮಾಡಲಾಯಿತು. 1934ನೆಯ ಸಾಲಿನ ಆಖೈರಿನವರೆಗೆ ವಾರ್ಷಿಕ ಸಮ್ಮೇಳನವು ಸೇರಲಿಲ್ಲವಾದ್ದರಿಂದ ಈ ಅಸೋಸಿಯೇಷನ್ನಿನ ವರದಿಯು ಇದುವರೆವಿಗೂ ಪ್ರಕಟವಾಗಲಿಲ್ಲ.

ಈ ಸಂಸ್ಥೆಯು ಮೈಸೂರು ಸಂಸ್ಥಾನದಲ್ಲಿ ಹೇಗೆ ಅಭಿವೃದ್ಧಿಹೊಂದಿತೆಂದು ತಿಳಿಯಲು ಈ ರಿಪೋರ್ಟನ್ನು ಮೂರು ಕಾಲಗಳದ್ದಾಗಿ ವಿಂಗಡಿಸಬಹುದು.

ಅವು ಯಾವುವೆಂದರೆ :—

(1) 1932ನೆಯ ಮೇ ತಿಂಗಳಿಂದ 1933ನೆಯ ಜೂನ್ ಆಖೈರಿನವರೆಗೆ.

(2) 1933ನೆಯ ಜುಲೈ ತಿಂಗಳಿಂದ 1934ನೆಯ ಜೂನ್ ಆಖೈರಿನ ವರೆಗೆ.

(3) 1934ನೆಯ ಜುಲೈ ತಿಂಗಳಿಂದ 1934ನೆಯ ಡಿಸೆಂಬರು ಆಖೈರಿನ ವರೆಗೆ.

ಈ ವರದಿಯ ಕೊನೆಯಲ್ಲಿ ಲಗತ್ತಿಸಿರುವ ಜಮಾಖರ್ಚಿನ ಎರಡು ಲೆಕ್ಕಗಳ ವರದಿಯು ಈ ಅಸೋಸಿಯೇಷನ್ನಿನ ಆರ್ಥಿಕ ಸ್ಥಿತಿಯನ್ನು ತಿಳಿಸುತ್ತದೆ.

ಮೊದಲನೆಯ ಕಾಲದಲ್ಲಿ, ಅಂದರೆ 1932ನೆಯ ಮೇ ತಿಂಗಳಿಂದ 1933ನೆಯ ಜೂನ್ ಆಖೈರಿನವರೆಗೆ ಈ ಗರ್ಲ್ ಗೈಡ್ ಅಸೋಸಿಯೇಷನ್: ಈ ಸಂಸ್ಥೆಯನ್ನು ಮೈಸೂರು ದೇಶದಲ್ಲಿ ಆದಷ್ಟು ಸ್ಥಳಗಳಲ್ಲಿ ಹಬ್ಬಿಸಲು ಕೈಲಾದಷ್ಟು ಪ್ರಯತ್ನಪಟ್ಟಿತು. ಬೆಂಗಳೂರು, ಮೈಸೂರು, ತುಮಕೂರು, ಹಾಸನ, ಶಿವಮೊಗ್ಗ ಮತ್ತು ಕೋಲಾರ ಗೋಲ್ಡ್ ಫೀಲ್ಡ್ಸ್ ಈ ಸ್ಥಳಗಳಲ್ಲಿ ಆರು ಜನ ಡಿಸ್ಟ್ರಿಕ್ಟು ಕಮಿಷನರುಗಳನ್ನು, ನೇಮಕಮಾಡಲಾಯಿತು. ಐದು ಡಿಸ್ಟ್ರಿಕ್ಟುಗಳಲ್ಲಿ ಲೋಕಲ್ ಅಸೋಸಿಯೇಷನ್‌ಗಳನ್ನು ಸ್ಥಾಪಿಸಲಾಯಿತು. ಕೋಲಾರ ಗೋಲ್ಡ್‌ಫೀಲ್ಡ್ಸ್‌ನ ಮಿಸೆಸ್ ವಿವಾನ್ ರೋರವರನ್ನು (Mrs. Vivane Rowe) ಸಂಸ್ಥಾನದ ಟ್ರೈನರನ್ನಾಗಿ ನೇಮಕಮಾಡಲಾಯಿತು.

ಈ ಅಸೋಸಿಯೇಷನ್ನಿನಿಂದ ಉದಕಮಂಡಲದ (Ootacamund) ಟ್ರೈನಿಂಗ್ ಕ್ಯಾಂಪಿಗೆ 1932ನೆಯ ಇಸವಿಯಲ್ಲಿ ಹತ್ತು ಜನ ಗೈಡರುಗಳನ್ನೂ 1933ನೆಯ ಇಸವಿಯಲ್ಲಿ ಎಂಟು ಜನಗಳನ್ನೂ ಕಳುಹಿಸಿಕೊಡಲಾಯಿತು. ಗೈಡುಗಳ ಮತ್ತು ಗೈಡುಗಳ ಲೀಡರ್‌ಗಳ ಪ್ರಯೋಜನಾರ್ಥವಾಗಿ ಒಂದು ಸುವ್ಯವಸ್ಥಿತವಾದ ಸರ್ಕ್ಯುಲೇಟಿಂಗ್ ಲೈಬ್ರರಿಯನ್ನು (Circulating Library) ಪ್ರಾರಂಭಿಸಿ, ಅದರಲ್ಲಿನ ಗೈಡ್ ವಿಷಯದ ಪುಸ್ತಕಗಳನ್ನು ಗೈಡುಗಳಿಗೆ ಉಚಿತವಾಗಿ ಓದಲು ಕೊಡಲ್ಪಡಲು ಏರ್ಪಾಡು ಮಾಡಲ್ಪಟ್ಟಿತು.

ಸಂಸ್ಥಾನದ ಸೆಕ್ರಿಟೆರಿಗಳು ಎಲ್ಲಾ ಡಿಸ್ಟ್ರಿಕ್ಟುಗಳಲ್ಲಿಯೂ ಸಂಚಾರ ಮಾಡಿ ಕಂಪೆನಿಗಳನ್ನು ಪರೀಕ್ಷಿಸಿದ್ದಲ್ಲದೆ ಗೈಡ್ ಸಂಬಂಧವಾದ ಉಪನ್ಯಾಸಗಳನ್ನು ಮಾಡಿದರು.

ಈ ಸಂಸ್ಥೆಯ ರಚನಾರ್ಥವಾಗಿ ಮಾಡಿದ ಈ ಪ್ರಯತ್ನಗಳ ಫಲರೂಪವಾಗಿ ಜೂನ್ 1933ರಲ್ಲಿ 20 ಕಂಪೆನಿಗಳಲ್ಲಿ 500 ಜನ ಗರ್ಲ್

ಗೈಡಗಳೂ, 5 ಬ್ಲೂ ಬರ್ಡ್ ಫ್ಲಾಕುಗಳಲ್ಲಿ 200 ಜನ ಬ್ಲೂ ಬರ್ಡ್‌ಗಳೂ ಮತ್ತು ಸುಮಾರು 25 ಜನ ಕ್ಯಾಪ್ಟ್‌ನ್ ಮತ್ತು ಲೀಡರುಗಳೂ ಇದ್ದರು.

ಮೆಥಾಡಿಸ್ಟ್ ಮಿಷನ್ ಸ್ಕೂಲಿ (Methodist Mission Schools) ನಲ್ಲಿನ ಬ್ಲೂ ಬರ್ಡ್ ಮತ್ತು ಗರ್ಲ್ ಗೈಡುಗಳು ನಮ್ಮ ಸಂಸ್ಥೆಗೆ ಸೇರಿಸಲ್ಪಟ್ಟರು. ಅವರೆಲ್ಲರೂ 6-3-1933ರಲ್ಲಿ ಲೇಡಿ ಮಿರ್ಜಾ ಇಸ್ಮಾಯಿಲ್ ರವರಿಂದ ಎನ್‌ರೋಲ್ (Enrol) ಮಾಡಲ್ಪಟ್ಟರು.

ಎರಡನೆಯ ಕಾಲದಲ್ಲಿ, ಅಂದರೆ, ಜುಲೈ 1933ರಿಂದ 1934ನೆಯ ಜೂನ್ ಆಖೈರ್ ವರೆಗೆ ಈ ಸಂಸ್ಥೆಯು ಬಹಳವಾಗಿ ಮುಂದುವರಿಯಿತು. ಲೋಕಲ್ ಅಸೋಸಿಯೇಷನ್‌ಗಳು ಏಳಕ್ಕೆ ಹೆಚ್ಚಿದವು. 951 ಜನ ಗೈಡರುಗಳನ್ನೂ, ಗೈಡುಗಳನ್ನೂ, ರೇಂಜರುಗಳನ್ನೂ, ಬ್ಲೂ ಬರ್ಡ್‌ಗಳನ್ನೂ ಒಳಗೊಂಡ 27 ಕಂಪೆನಿಗಳೂ, 3 ರೇಂಜರು ಕಂಪೆನಿಗಳೂ, 12 ಫ್ಲಾಕುಗಳೂ ಇದ್ದವು.

ಎನ್ರೋಲ್ (Enrol) ಆಗಲು ಸಿದ್ಧರಾದ 100 (ಒಂದು ನೂರು) ಜನ ರಿಕ್ರೂಟರುಗಳೂ, 32 ಜನ ರೇಂಜರುಗಳೂ, 40 ಜನ ಬ್ಲೂ ಬರ್ಡ್‌ಗಳೂ ತರಪೇತಿನಲ್ಲಿದ್ದರು.

ಸಂಸ್ಥಾನಾ ಮಳೆಯ ಗೈಡ್ ಜನ್ಮೋತ್ಸವದ ದಿವಸ, ಅಂದರೆ, 1934ನೆಯ ಫೆಬ್ರವರಿ 24ನೆಯ ತಾರೀಖಿನ ದಿವಸ ಎಲ್ಲಾ ಡಿಸ್ಟ್ರಿಕ್ಟುಗಳಲ್ಲಿ ಆಟಗಳೂ, ಸ್ಪರ್ಧೆಗಳೂ, ಮತ್ತು ರ್‍ಯಾಲಿಗಳೂ ಏರ್ಪಡಿಸಲ್ಪಟ್ಟಿದ್ದವು.

1933ನೆಯ ಡಿಸೆಂಬರ್ 11ರಲ್ಲಿ ಮಿಸೆಸ್ ರೋ (Rowe) ರವರು ಒಂದು ಸಂತೋಷಕೂಟವನ್ನು ಏರ್ಪಡಿಸಿದ್ದರು. ಆಗ ಸಂಸ್ಥಾನದ ಸೆಕ್ರಿಟೆರಿಯವರು ಕೋಲಾರ ಗೋಲ್ಡ್ ಫೀಲ್ಡ್ಸ್‌ನ ಎರಡು ಕಂಪೆನಿಗಳನ್ನು ಎನ್ರೋಲ್ ಮಾಡಿದರು.

ಸಂಸ್ಥೆಯ ಸೆಕ್ರಿಟೆರಿಗಳು ಮತ್ತು ಟ್ರೈನರ್ ಎಲ್ಲಾ ಡಿಸ್ಟ್ರಿಕ್ಟುಗಳಿಗೆ ಹೋಗಿ ಕಂಪೆನಿಗಳನ್ನು ಪರೀಕ್ಷಿಸಿದ್ದಲ್ಲದೆ ಉಪಯುಕ್ತ ಸಲಹೆಗಳನ್ನು ಕೊಟ್ಟಿದ್ದುದರಿಂದ ಫಲವು ಬಹಳ ಉತ್ತೇಜನಕರವಾಗಿದ್ದಿತು. ತುಮಕೂರಿನ ಡಿಸ್ಟ್ರಿಕ್ಟ್ ಕಮಿಷನರು ಆಹ್ವಾನ ಮಾಡಿದ್ದರ ಮೇಲೆ ಸೆಕ್ರಿಟೆರಿಯವರು ಕಮಿಟಿ ಮೆಂಬರೊಬ್ಬರೊಡನೆ ಸಂಚಾರ ಹೊರಟು ಮಧುಗಿರಿ, ಸಿರಾ ಮತ್ತು ತಿಪ್ಟೂರುಗಳಲ್ಲಿ ಸಂಚರಿಸಿದರು.

1933ನೆಯ ನವೆಂಬರ್ 15ನೆಯ ತಾರೀಖಿನಿಂದ 17ನೆಯ ತಾರೀಖಿನ ವರೆವಿಗೂ ಲಾಹೋರಿನಲ್ಲಿ ನಡೆದ ಹೆಡ್‌ಕ್ವಾರ್ಟರ್ ಎಗ್ಜಿಕ್ಯೂಟಿವ್ (Headquarter Executive Committee) ಕಮಿಟಿಗೆ ನಮ್ಮ ಸಂಸ್ಥಾನದ ಸಂಸ್ಥೆಯ ಸೆಕ್ರಿಟೆರಿಯವರು ಕಳುಹಿಸಲ್ಪಟ್ಟಿದ್ದರು.

ಉದಕಮಂಡಲದಲ್ಲಿ (Ootacamund) 1934ನೆಯ ಇಸವಿ 26ನೆಯ ತಾರೀಖಿನಿಂದ ಜೂನ್ 11ನೆಯ ತಾರೀಖಿನ ವರೆಗೆ ನಡೆದ ಟ್ರೈನಿಂಗ್ ಕ್ಯಾಂಪಿನಲ್ಲಿ "ಲೋಕಲ್ ಅಡ್ವೈಸರ್ ಪರೀಕ್ಷೆ"ಯಲ್ಲಿ ಉತ್ತೀರ್ಣರಾಗಲು ಮಿಸ್ ಪಾಲ್‌ರವರನ್ನು ಚುನಾಯಿಸಲಾಯಿತು. ಈ ಕಾಲದಲ್ಲಿ ಸಂಸ್ಥಾನದ ರೂಲ್ಸು ಮತ್ತು ಬೈಲಾಗಳನ್ನು ಇಂಗ್ಲೀಷ್, ಕನ್ನಡ ಮತ್ತು ಉರ್ದು ಭಾಷೆಗಳಲ್ಲಿ ಪ್ರಚುರಪಡಿಸಿದ್ದರಿಂದ ಈ ಸಂಸ್ಥೆ ರಚನೆಯ ಕಾರ್ಯವು ಅತಿ ಸುಲಭವಾಯಿತು. ಗರ್ಲ್ ಗೈಡ್ ಪುಸ್ತಕಗಳನ್ನು ಕನ್ನಡಕ್ಕೆ ತರ್ಜುಮೆ ಮಾಡಲು ಏರ್ಪಾಡು ಮಾಡಲಾಯಿತು. ಫಾರಂಗಳನ್ನೂ ಮತ್ತು ಸಣ್ಣ ಪುಸ್ತಕಗಳನ್ನೂ ದೇಶಭಾಷೆಗಳಿಗೆ ತರ್ಜುಮೆ ಮಾಡಿ ಅಚ್ಚುಹಾಕಿಸಲು ಏರ್ಪಾಡುಮಾಡಲಾಯಿತು. ನಮ್ಮ ಸಂಸ್ಥಾನದ ಗೈಡ್‌ಗಳ ಮತ್ತು ಬ್ಲೂ ಬರ್ಡ್‌ಗಳ ಉಪಯೋಗಾರ್ಥವಾಗಿ ವಾರಂಟುಗಳೂ, ಬ್ರೂಚ್‌ಗಳೂ ಮತ್ತೂ ಬ್ಯಾಡ್ಜ್‌ಗಳೂ ತಯಾರಿಸಲ್ಪಟ್ಟವು.

ಈ ಕಾಲದಲ್ಲಿ ಬಹಳ ಅತಿಶಯದಿಂದ ನಡೆದ ಕಾರ್ಯವನ್ನೂ ಅಂದರೆ, 1933ನೆಯ ಮಾರ್ಚಿ ತಿಂಗಳಿನಲ್ಲಿ ಶ್ರೀಮದ್ಯುವರಾಣಿಯವರು ನಡೆಸಿದ ನಮ್ಮ ಗೈಡುಗಳ ಹೆಡ್‌ಕ್ವಾರ್ಟರ್ ಕಟ್ಟಡದ ಶಂಕುಸ್ಥಾಪನೋತ್ಸವದ ವಿಚಾರವಾಗಿ ಹೇಳದಿದ್ದರೆ ಈ ಕಾಲದ ವರದಿಯು ಪೂರ್ಣವಾಗಲಾರದು. ನಮ್ಮ ಗೈಡ್ ಹೆಡ್‌ಕ್ವಾರ್ಟರ್ ಕಟ್ಟಡವನ್ನು ಕಟ್ಟಲು ಘನಹೊಂದಿದ ನಮ್ಮ ಸರ್ಕಾರದವರು ದಯೆಯಿಟ್ಟು ಬಹಳ ವಿಶಾಲವಾದ ಮತ್ತು ಸುಂದರವಾದ ನಿವೇಶನವನ್ನು ಕೊಟ್ಟಿದ್ದಲ್ಲದೆ, ಬಹಳ ಸುಂದರವಾದ ಕಟ್ಟಡವನ್ನು ಕಟ್ಟಿ ಕೊಡಲು ಒಪ್ಪಿಕೊಂಡರು. ಈ ಸುಂದರವಾದ ನಿವೇಶನವನ್ನು ಮತ್ತು ಕಟ್ಟಡವನ್ನು ಉದಾರವಾಗಿ ನಮಗೆ ಕೊಟ್ಟದ್ದಕ್ಕಾಗಿ ಸರ್ ಮಿರ್ಜಾ ಇಸ್ಮಾಯಿಲ್ ರವರಿಗೆ ನಮ್ಮ ವಂದನೆಗಳು.

ಶಂಕುಸ್ಥಾಪನೋತ್ಸವದಲ್ಲಿ, ಆ ಕಟ್ಟಡದ ನಿವೇಶನದಲ್ಲಿ 1934ನೆಯ ಮಾರ್ಚಿ 4ನೆಯ ತಾರೀಖಿನ ದಿವಸ ಒಂದು ಘನವಾದ ರ್‍ಯಾಲಿ (Rally)

ಯು ಏರ್ಪಡಿಸಲ್ಪಟ್ಟಿತು. ಆ ಸಮಯದಲ್ಲಿ ಶ್ರೀಮದ್ಯುವರಾಣಿಯವರು ಗೈಡ್ ವಂದನೆಯನ್ನು ಸ್ವೀಕರಿಸಿದರು. ಬೆಂಗಳೂರು ಡಿಸ್ಟ್ರಿಕ್ಟಿನ ಗೈಡು ಗಳು ಮತ್ತು ಬ್ಲೂ ಬರ್ಡ್‌ಗಳು ತಮ್ಮ ಆಟ ವಿಶೇಷಗಳನ್ನು ಆ ಸಮ ಯದಲ್ಲಿ ಪ್ರದರ್ಶಿಸಿದರು. ಆ ಸಂದರ್ಭದಲ್ಲಿ ಶ್ರೀಮದ್ಯುವರಾಜರೂ, ಲೇಡಿ ಬೇಡನ್ ಪೊವೆಲ್ (Baden Powell) ರವರೂ, ಮಿಸೆಸ್ ಚಾಡ್ವಿಕ್‌ರವರೂ (Chadwick) ಮತ್ತು ಮಿಸೆಸ್ ಕೊನರಾನ್ ಸ್ಮಿತ್ (Conran Smith) ರವರೂ ತಂತಿಯ ಮೂಲಕ ತಮ್ಮ ಸ್ವಾಗತ ವಚನ ವನ್ನು ಕಳುಹಿಸಿದ್ದರು. ಸುಮಾರು ಒಂದು ಸಾವಿರ ಮಹಿಳೆಯರು ನೆರೆದಿದ್ದರು.

ನಮ್ಮ ವರದಿಯ ಮೂರನೆ ಕಾಲವು 1934ನೆಯ ಜುಲೈ ತಿಂಗ ಳಿಂದ ಡಿಶೆಂಬರ್ 1934ರ ವರೆಗೆ. ಈ ಕಾಲದ ಪ್ರಾರಂಭದಲ್ಲಿ ಅಂದರೆ 1934ನೆಯ ಇಸವಿ ಜುಲೈ 8ನೆಯ ತಾರೀಖಿನ ದಿವಸ ನಮ್ಮ ಶ್ರೀಮನ್ ಮಹಾರಾಜರವರ ಮಾತೋಶ್ರೀಯವರಾದ ಶ್ರೀಮದ್ವಾಣೀವಿಲಾಸ ಸನ್ನಿ ಧಾನದವರು ಇಹಲೋಕವನ್ನು ತ್ಯಜಿಸಿ ನಮ್ಮ ದೇಶವನ್ನೆಲ್ಲ ಶೋಕಕ್ಕೀಡು ಮಾಡಿದರು.

ಈ ವಿಚಾರವನ್ನು ನಮ್ಮ ವರದಿಯಲ್ಲಿ ಅತ್ಯಂತ ವ್ಯಸನದಿಂದ ತಿಳಿಸ ಬೇಕಾಗಿದೆ. ಶ್ರೀಮದ್ವಾಣೀವಿಲಾಸ ಸನ್ನಿಧಾನದವರು ಮೈಸೂರು ಚರಿ ತ್ರೆಯಲ್ಲಿ ಬಹಳ ಕೀರ್ತಿ ಪಡೆದವರು. ಅವರು ಸಂಸ್ಥಾನದ ಸ್ತ್ರೀಯರನ್ನು ಮತ್ತು ಮಕ್ಕಳನ್ನೂ ತಮ್ಮವರೆಂದು ತಿಳಿದುಕೊಂಡು ಶ್ರಮವನ್ನು ಲಕ್ಷ್ಯ ಮಾಡದೆ ಅವರ ಅಭಿವೃದ್ಧಿಗೆ ಅಗತ್ಯವಾದ ಕಾರ್ಯಗಳನ್ನು ಮಾಡುತ್ತಿದ್ದರು. ಈ ವಿಷಯದಲ್ಲಿ ನಮಗೆ ಅಂದರೆ ಗೈಡುಗಳಿಗಾದರೋ ಅವರು ಆದರ್ಶ ಪ್ರಾಯರಾಗಿದ್ದರು.

1934ನೆಯ ಮಾರ್ಚಿ ತಿಂಗಳಿಂದ 1934ನೆಯ ಡಿಶೆಂಬರ್ ಅಂತ್ಯ ದವರೆಗೆ ಈ ಮಂಡಳಿಯು ಬಹಳ ಬೇಗ ಅಭಿವೃದ್ಧಿ ಹೊಂದಿತು. ಹಿಂದೆ 597 ಜನವಿದ್ದದ್ದು ಈ ಕಾಲದಲ್ಲಿ ಈ ಸಂಖ್ಯೆಯು 29 ಗೈಡು ಕಂಪೆನಿ ಗಳನ್ನೂ, 4 ರೇಂಜರ್ ಕಂಪೆನಿಗಳನ್ನೂ, 11 ಬ್ಲೂ ಬರ್ಡ್ ಫ್ಲಾಕ್ ಗಳನ್ನೂ ಒಳಗೊಂಡು 1,100 ಜನಕ್ಕೇರಿತು. ಈ ವರ್ಷದಲ್ಲಿ ಈ ಸಂಘವು ಅನೇಕ ವಿಷಯಗಳಲ್ಲಿ ಮುಂದುವರಿಯಿತು.

ಮೂರು ಹೊಸ ಡಿಸ್ಟ್ರಿಕ್ಟುಗಳಲ್ಲಿ ಅಂದರೆ, ಕಡೂರು, ಕೋಲಾರ ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟುಗಳಲ್ಲಿ ಗೈಡಿಂಗು ಹೊಸದಾಗಿ ಆರಂಭ ವಾಯಿತು. ಆ ಮೂರು ಡಿಸ್ಟ್ರಿಕ್ಟುಗಳಲ್ಲಿಯೂ ಗೈಡಿಂಗ್ ಕಾರ್ಯವು ಬಹಳ ಚನ್ನಾಗಿ ಕೆಲಸಮಾಡುತ್ತಲಿದೆ. ಈಗ ಎಂಟು ಡಿಸ್ಟ್ರಿಕ್ಟುಗಳಲ್ಲಿ ಲೋಕಲ್ ಅಸೋಸಿಯೇಷನ್‌ಗಳು ಇವೆ.

ಮೇ 1934ರಲ್ಲಿ ಉದಕಮಂಡಲದಲ್ಲಿ (Ootacamund) ನಡೆದ ಟ್ರೈನಿಂಗ್ ಕ್ಯಾಂಪಿನಲ್ಲಿ "ಲೋಕಲ್ ಅಡ್ವೈಸರ್ಸ್ ಟೆಸ್ಟ" ನಲ್ಲಿ ಸ್ಪರ್ಧೆಗೆ ನಿಲ್ಲಲು ಒಬ್ಬ ಗೈಡರನ್ನು ಅಸೋಸಿಯೇಷನ್ ಖರ್ಚಿನಿಂದ ಕಳುಹಿಸ ಲಾಯಿತು. 1934ನೆಯ ಸೆಪ್ಟೆಂಬರ್‌ನಲ್ಲಿ ಮದರಾಸಿನಲ್ಲಿ ನಡೆದ ಟ್ರೈನಿಂಗ್ ಕ್ಯಾಂಪಿಗೆ ಇಬ್ಬರು ಗೈಡರ್‌ಗಳು ಕಳುಹಿಸಲ್ಪಟ್ಟಿದ್ದರು.

ಗೈಡುಗಳನ್ನು ವನವಿಹಾರ (Picnic) ಮತ್ತು ಪ್ರಕೃತಿ ಪಾಠಗಳ ನೆವ ದಿಂದ ಕಮಿಷನರ್ ಮತ್ತು ಕ್ಯಾಪ್ಟನ್‌ಗಳು ಹೊರಗೆ ಕರೆದುಕೊಂಡು ಹೋಗಿ ದ್ದುದರಿಂದ ಅವರಿಗೆ ಪ್ರಕೃತಿ ಸೌಂದರ್ಯವನ್ನು ನೋಡಲು ಅವಕಾಶಗಳು ಅನೇಕವಿದ್ದುವು. ಇದರಿಂದ ಗೈಡುಗಳು ಬಹಳ ಪ್ರಯೋಜನಹೊಂದಿ ರುತ್ತಾರೆ.

ಚೀಫ್ ಕಮಿಷನರಾದ ಲೇಡಿ ಮಿರ್ಜಾ ಇಸ್ಮಾಯಿಲ್‌ರವರು, ಮಿಸ್ ಡಿ. ಇವಾನ್ಸರವರು ಇಂಗ್ಲೆಂಡಿಗೆ ಹೋಗುವ ಸಂದರ್ಭದಲ್ಲಿ ಒಂದು ಸಂತೋಷಕೂಟವನ್ನು ಏರ್ಪಡಿಸಿ ಎಕ್ಸ್‌ಕ್ಯೂಟಿವ್ ಮೆಂಬರುಗಳನ್ನೂ, ಲೋಕಲ್ ಕ್ಯಾಪ್ಟನ್‌ಗಳನ್ನೂ ಆಹ್ವಾನಿಸಿದ್ದರು. ಮಿಸ್ ಇವಾನ್ಸ್‌ರವರು ಈ ಮಂಡಳಿಯ ಪುರೋಭಿವೃದ್ಧಿಗೋಸ್ಕರ ಬಹಳ ಮೆಹನತ್ತು ಮಾಡಿರು ತ್ತಾರೆ. ಇವರಿಗೆ ನಮ್ಮ ಕೃತಜ್ಞತಾಪೂರ್ವಕ ವಂದನೆಗಳು.

ನಮ್ಮ ಅದೃಷ್ಟಬಲದಿಂದ ಪ್ರತಿ ಡಿಸ್ಟ್ರಿಕ್ಟಿನಲ್ಲಿಯೂ ಕಾರ್ಯಪಟುಗ ಳಾದ ಡಿಸ್ಟ್ರಿಕ್ಟ್ ಕಮಿಷನರುಗಳು ನಮಗೆ ನೆರವಾಗಿರುತ್ತಾರೆ. ಅವರ ಸಹಾಯದಿಂದ ಈ ಮಂಡಳಿಯು ಕೆಲಸವು ಸಮರ್ಪಕವಾಗಿ ನಡೆಯುತ್ತ ಲಿದೆ. ಈ ಮಂಡಳಿಯು ಈ ರೀತಿ ಅಭಿವೃದ್ಧಿ ಹೊಂದಲು ಡಿಸ್ಟ್ರಿಕ್ಟು ಕಮಿ ಷನರುಗಳೇ ಕಾರಣರು. ಈ ಸಂದರ್ಭದಲ್ಲಿ ಡಿಸ್ಟ್ರಿಕ್ಟು ಕಮಿಷನರುಗಳು ಮಾಡಿರುವ ಮೆಹನತ್ತು ಹೊಗಳಲರ್ಹವಾಗಿದೆ. ಇವರಲ್ಲಿ ಅನೇಕ ಮಹಿ ಳೆಯರು ತಮ್ಮ ಇತರ ಕೆಲಸದ ಮಧ್ಯೆ-ಇವರಲ್ಲಿ ಅನೇಕರು ಡಾಕ್ಟರುಗಳು

ಮತ್ತು ವಿದ್ಯಾ ಇಲಾಖೆಯವರು—ಈ ಮಂಡಳಿಯ ಅಭಿವೃದ್ಧಿ ಕಾರ್ಯವನ್ನು ಕೈಕೊಂಡಿರುವುದು ಬಹಳ ಸ್ತುತ್ಯಾರ್ಹವಾಗಿದೆ.

ಈ ವರುಷದಲ್ಲಿ ಅನೇಕ ಪ್ರೊಫಿಷಿಯನ್ಸಿ ಮತ್ತು ಎರಡನೆ ದರ್ಜೆಯ ಬ್ಯಾಡ್ಜ್‌ಗಳು ಕೊಡಲ್ಪಟ್ಟವು. ಎರಡನೆ ಮತ್ತು ಮೊದಲನೆ ದರ್ಜೆಯ ಪರೀಕ್ಷೆಗಳಲ್ಲಿ ಅಭಿವೃದ್ಧಿಯು ಕಂಡುಬಂದಿದೆ. ಈ ಕೆಳಗಿನ ಪಟ್ಟಿಯಲ್ಲಿ ಯಾವಯಾವ ಪದಕಗಳು ಕೊಟ್ಟಿದ್ದೇವೆಂದು ತಿಳಿಸಿರುತ್ತೇವೆ.

I ಮೊದಲನೆಯ ದರ್ಜೆ :—

II ದ್ವಿತೀಯು ದರ್ಜೆ ಪದಕ :—

III ಪ್ರೊಫಿಷಿಯನ್ಸಿ ಬ್ಯಾಡ್ಜ್‌ಗಳು :—

ಅಡಿಗೆ ಪದಕ. (Cooks badges)	...	56
ಗೃಹಕೃತ್ಯದ ಪದಕ. (Domestic badges)	...	30
ಮನೆಕೆಲಸದ ಪದಕ. (House-keeper)	...	11
ಸೈಕಲಿಸ್ಟ್ಸ್. (Cyclists)	...	3
ರೋಗಿಯದಾದಿ. (Sick Nurse)	...	7
ಹೊಲಿಗೆ ಕೆಲಸ. (Needle Work)	...	21
ಮಕ್ಕಳದಾದಿ. (Child Nurse)	...	7
ದಾರಿ ಕಂಡುಹಿಡಿಯುವುದು. (Path Finder)	...	2
ಮೊದಲನೆ ದರ್ಜೆ	...	2
ದ್ವಿತೀಯ ದರ್ಜೆ ಪದಕ ...	...	150
ಪ್ರವಾಸ	...	1
ಪ್ರವಾಸ ಪದಕವಾದ ಮೇಲೆ ...	...	...
ಕಸರತ್ತು	...	18
ಹೆಣಿಗೆ	...	13
ಅಂಬ್ಯುಲೆನ್ಸ್. (Ambulence) ...	...	6

ನಕ್ಷತ್ರಗಳು.—(Stars) :—

ರೇಂಜರ್ ನಕ್ಷತ್ರ ..	...	31
ಐದು ವರ್ಷದ ನಕ್ಷತ್ರ	...	14
ಗೈಡ್ ನಕ್ಷತ್ರ	...	347
ಬ್ಲ್ಯೂಬರ್ಡ್ಸ್ ನಕ್ಷತ್ರ	...	30

ಅನೇಕ ಪದಕಗಳು ನಮಗೋಸ್ಕರವೇ ತಯಾರಿಸಲ್ಪಟ್ಟವು. ಆದುದರಿಂದ ಅವುಗಳಿಗೆ ಕಾಪಿ ರೈಟನ್ನು (Copyright) ತೆಗೆದುಕೊಳ್ಳಲು ಏರ್ಪಾಡುಮಾಡಲ್ಪಟ್ಟಿದೆ.

ನಮ್ಮ ಅಸೋಸಿಯೇಷನ್ನಿನ ಕಾನೂನುಗಳನ್ನು ಮತ್ತು ಬೈಲಾಗಳನ್ನು ಮೂರು ಭಾಷೆಗಳಲ್ಲಿ ಮುಫತ್ತಾಗಿ ಮುದ್ರಣ ಮಾಡಿದುದಕ್ಕಾಗಿಯೂ ಮತ್ತು ನಮ್ಮ (Warrant) ವಾರಂಟುಗಳನ್ನೂ ಮತ್ತು ಫಾರಂಗಳನ್ನು ಪುಕ್ಕಟೆಯಾಗಿಯೂ ಮುದ್ರಣ ಮಾಡಿಕೊಟ್ಟಿದ್ದುದಕ್ಕಾಗಿಯೂ ನಾವು ಸರ್ಕಾರಕ್ಕೆ ಬಹಳ ಕೃತಜ್ಞರಾಗಿದ್ದೇವೆ.

ಹೆಡ್‌ಕ್ವಾರ್ಟ್ಸರಿಂದ ಪ್ರತಿ ಡಿಸ್ಟ್ರಿಕ್ಟಿಗೂ ಖರ್ಚಿಗೋಸ್ಕರ ಪ್ರಸಕ್ತ ವರುಷದಲ್ಲಿಯೂ ಕಳೆದಸಾಲಿನಲ್ಲಿಯೂ ಕೂಡ 50 ರೂಪಾಯಿಗಳನ್ನು ಗ್ರಾಂಟಾಗಿ ಕೊಡಲಾಯಿತು. ಎಲ್ಲ ಟ್ರೈನಿಂಗು ಕೂಡಾ ಮುಫತ್ತಾಗಿಯೇ ಕೊಡಲ್ಪಟ್ಟಿತು. ಅನೇಕ ಗೈಡುಗಳಿಗೂ ಮತ್ತು ಸಹಾಯಕರಾಗಿ ಬಂದ ಇತರರಿಗೂ ಅವರು ಗೈಡು ಸಂಬಂಧವಾದ ಕೆಲಸಗಳಿಗೆ ಪ್ರಯಾಣಮಾಡಿದಾಗ ಪ್ರಯಾಣದ ಖರ್ಚನ್ನು ಕೂಡ ಕೊಡಲಾಯಿತು. ಸಾಮಾನ್ಯವಾಗಿ ಎಲ್ಲ ಪದಕಗಳನ್ನು ಮುಫತ್ತಾಗಿ ಕೊಡಲಾಯಿತು.

ಶ್ರೀಮದ್ಯುವರಾಣಿಯವರು ನಮ್ಮ ಅಸೋಸಿಯೇಷನ್ನಿಗೋಸ್ಕರ ಬಹಳ ಸುಂದರವಾದ ಗುರಾಣಿ (Shield) ಯೊಂದನ್ನು ಅನುಗ್ರಹಿಸಿದರು. ಚೀಫ್ ಕಮಿಷನರಾದ ಲೇಡಿ ಇಸ್ಮಾಯಿಲ್‌ರವರು ಮತ್ತೊಂದು ಗುರಾಣಿ (Shield) ಯನ್ನು ಮತ್ತು ಚೀಫ್ ಬ್ಲೂ ಬರ್ಡ್ಸಾದ ಶ್ರೀಮತಿ ಜಯರಪರು ಇನ್ನೊಂದು ಗುರಾಣಿ (Shield) ಯನ್ನು ನಮ್ಮ ಅಸೋಸಿಯೇಷನ್ನಿಗೆ ದಯಪಾಲಿಸಿದರು. ಈ ಸಂದರ್ಭದಲ್ಲಿ ಇವರಿಗೆಲ್ಲ ನಮ್ಮ ವಂದನೆಗಳನ್ನು ಸಮರ್ಪಿಸುತ್ತೇವೆ.

ನಮ್ಮ ಹೆಡ್‌ಕ್ವಾರ್ಟರ್ ಕಟ್ಟಡವು ಪೂರ್ತಿಯಾಗುತ್ತಿದೆ. ಅದರ ಪ್ರವೇಶೋತ್ಸವವು ಇಷ್ಟರಲ್ಲಿಯೇ ಆಗಬಹುದೆಂದು ನಿರೀಕ್ಷಿಸುತ್ತಿದ್ದೇವೆ.

ಹಾಲಿ ಇಂಗ್ಲೆಂಡಿನಲ್ಲಿ ವಿದ್ಯಾಭ್ಯಾಸಮಾಡುತ್ತಿರುವ ನಮ್ಮ ಗೈಡರಾದ ಶ್ರೀಮತಿ ಇಕ್ಬಲ್ ಉನ್ನೀಸಾ ಬೇಗಂರವರು ಅಡೆಲ್ ಬೋರ್ಡ (Adelboden Switzerland) ನಲ್ಲಿ ನಡೆದ ಎಂಟನೇ ಗೈಡ್ ವರ್ಲ್ಡ್ ಕಾನ್ಫರೆನ್ಸ್ (Guide World Conference) ನಲ್ಲಿ ನಮ್ಮ ಪ್ರತಿನಿಧಿಯಾಗಿದ್ದರು. ಈಚೆಗೆ ನಡೆದ ಟ್ರೈನಿಂಗ್ ಕ್ಯಾಂಪಿನಲ್ಲಿ ಮಹತ್ವವಾದ ವಿಶೇಷವೇನೆಂದರೆ, ನಮ್ಮ ಗೈಡ್ ಮಂಡಳಿಗೆ ಮೂರು ಜನ ರಾಜ

ಕುಮಾರಿಯರಾದ, ರಾಜಕುಮಾರಿ ವಿಜಯ, ರಾಜಕುಮಾರಿ ಸುಜಯ, ಮತ್ತು ರಾಜಕುಮಾರಿ ಜಯ ಎಂಬವರನ್ನು ಸೇರಿಸಿದ್ದು. ರಾಜಕುಮಾರಿಯರನ್ನು ನಮ್ಮ ಮಂಡಳಿಗೆ ಸೇರಿಸಿಕೊಂಡದ್ದು ಇದೇ ಮೊದಲು. ಶ್ರೀಮದ್ಯುವರಾಣಿಯವರು ಬಾಲಕಿಯಾದ ರಾಜಕುಮಾರಿ ಜಯನನ್ನು ಚೀಫ್ ಬ್ಲ್ಯೂ ಬರ್ಡ್ರವರನ್ನಾಗಿ ಮಾಡಿದ ಉತ್ಸವವು ಬಹಳ ಆನಂದದಾಯಕವಾಗಿದ್ದಿತು.

1934ನೆಯ ನವೆಂಬರ್ 23ನೆಯ ತಾರೀಖಿನಲ್ಲಿ ವಾರ್ಷಿಕ ಸಮ್ಮೇಳನವು ಚೀಫ್ ಗೈಡ್ ಶ್ರೀಮದ್ಯುವರಾಣಿಯವರ ಅಗ್ರಾಸನತ್ವದಲ್ಲಿ ನಡೆಯಿತು. ಡಿಸ್ಟ್ರಿಕ್ಟ್ ಕಮಿಷನರುಗಳು ತಮ್ಮ ರಿಪೋರ್ಟನ್ನು ಓದಿದರು. ಆ ರಿಪೋರ್ಟುಗಳನ್ನು ಅಂತ್ಯಭಾಗದಲ್ಲಿ ಸೇರಿಸಿದೆ.

ಎಕ್ಸಕ್ಯೂಟಿವ್ ಕಮಿಟಿಯ ಮೆಂಬರುಗಳ ಚುನಾವಣೆಯು ಅನಿವಾರ್ಯದಿಂದ ಮುಂದುಹಾಕಲ್ಪಟ್ಟಿತು. ಆದರೆ, ಈಗ ಅದು ನಡೆದಿದೆ. ಪರಿಶಿಷ್ಟ ಭಾಗದಲ್ಲಿ 1935–36ನೆಯ ಇ.ಸ್ವಿಯ ಎಕ್ಸಕ್ಯೂಟಿವ್ ಮೆಂಬರುಗಳ ಪಟ್ಟಿಯನ್ನು ಕೊಟ್ಟಿದೆ.

ನಾವು ಅನೇಕ ಟ್ರೈನಿಂಗ್ ಕ್ಯಾಂಪುಗಳನ್ನು ನಡೆಸಿದರೂ ಕೂಡ್ಯ ದಿನದಿನವೂ ನಮ್ಮ ಸಂಸ್ಥಾನದಲ್ಲಿ ಹೆಚ್ಚುತ್ತಿರುವ ಗೈಡುಗಳನ್ನು ತರಬೇತ, ಮಾಡಲು ಸರಿಯಾಗಿ ತರಬೇತಾದ ಗೈಡರುಗಳ ಅಭಾವವು ಇದ್ದೇ ಇದೆ. ಮುಖ್ಯವಾಗಿ ಇಂಗ್ಲೀಷು ಭಾಷೆಯು ಗೊತ್ತಾಗದೆ ಇರುವ ಕೆಲವು ಡಿಸ್ಟ್ರಿಕ್ಟುಗಳಲ್ಲಿ ಅನುಭವಶಾಲಿಗಳಾದ ಮತ್ತು ದೇಶಭಾಷೆಗಳಲ್ಲಿ ಪರಿಶ್ರಮವನ್ನು ಹೊಂದಿರುವ ಮತ್ತು ತಮ್ಮ ಎಲ್ಲ ಕಾಲವನ್ನೂ ಡಿಸ್ಟ್ರಿಕ್ಟುಗಳಲ್ಲಿ ತಿರುಗಿ, ಒಂದೆರಡು ವಾರಗಳ ಮಾತ್ರವೇ ತರಬೇತಾಗಿ ತಮ್ಮ ಸಾಮರ್ಥ್ಯದಲ್ಲಿ ನಂಬಿಕೆ ಇಲ್ಲದವರಾಗಿರುವ ಗೈಡುಗಳಿಗೆ ಉತ್ತೇಜನವನ್ನು ತಿಳಿಸಲೂ ಇರುವಂತಹ ಗೈಡುಗಳ ಸಹಾಯವು ಒಂದು ವರ್ಷದ ಮಟ್ಟಿಗಾದರೂ ಅತ್ಯಗತ್ಯವಾಗಿದೆ. ಸದ್ಯದಲ್ಲಿ ನಮ್ಮ ಉದ್ದೇಶವು ಹಾಲಿ ಇರುವ ಕಂಪೆನಿಗಳನ್ನು ಉತ್ತಮಗೊಳಿಸಿ ಅವುಗಳನ್ನು ಮುಂದಕ್ಕೆ ತರುವುದೇ ಹೊರತು ಸುಮ್ಮನೆ ಕಂಪನಿಗಳ ಸಂಖ್ಯೆಯನ್ನು ಹೆಚ್ಚುಮಾಡುವುದಲ್ಲ. ಎರಡನೆಯ ದರ್ಜೆಯ ಮತ್ತು ಪ್ರವೀಣತೆಯ ಪದಕಗಳನ್ನು ಪಡೆಯುವುದರಲ್ಲಿ ಹೋದ ವರುಷ ನಮ್ಮ ಗೈಡುಗಳು ಬಹಳ ಮುಂದುವರಿದಿರುತ್ತಾರೆ.

ಈ ಮಧ್ಯೆ ನಾನು ಎಲ್ಲ ಡಿಸ್ಟ್ರಿಕ್ಟುಗಳಲ್ಲಿಯೂ ಹೋಗಿ ನೋಡಿದ್ದರಲ್ಲಿ ಗೈಡುಗಳಲ್ಲಿ ಉತ್ಸಾಹತೆಯೂ ಮತ್ತು ಮುಂದುವರಿಯಬೇಕೆಂಬ ಆಶೆಯೂ ಇರುವುದು ತಿಳಿಯಬಂತು.

ಗೈಡುಗಳೆಲ್ಲರಿಗೂ, ಮತ್ತು ಅವರ ಮೂಲಕ ಮುಂದಿನ ಪ್ರಜೆಗಳಿಗೂ ಕೂಡ, ಜೀವನದ ಬಿಗಿಯು ಚನ್ನಾಗಿ ಗೊತ್ತಾಗುತ್ತದೆ. ಬಾಲಕಿಯರು ಅವರ ಜೀವನದಲ್ಲಿ ಮಾಡಬೇಕಾದ ತಮ್ಮ ಕಾರ್ಯವನ್ನು, ಈ ಗೈಡಿಂಗ್ ತತ್ವವು ತಿಳಿಸುವುದಲ್ಲದೆ ಅವರ ಸದ್ಗುಣವನ್ನು ಹೆಚ್ಚಿಸುವುದು. ಪ್ರಪಂಚದಲ್ಲಿ ಎಲ್ಲ ಕಡೆಯಲ್ಲಿಯೂ ಈ ಸೋದರೀ ಮಂಡಳಿಯು ಹಬ್ಬಿರುವುದರಿಂದ, ಬಾಲಕಿಯರು ಒಬ್ಬೊಬ್ಬರನ್ನು ತಿಳಿದುಕೊಳ್ಳಲು ಅನುಕೂಲವಾಗಿದೆ. ನ್ಯಾಷನಲ್ ಪೋಸ್ಟ್ ಬಾಕ್ಸ್ (National Post Box) ಎಂಬುದನ್ನು ಸ್ಥಾಪಿಸಿರುವುದರಿಂದ ಆ ಸಂಸ್ಥೆಯ ಮೂಲಕ ಪ್ರಪಂಚದ ಎಲ್ಲಾ ಭಾಗದಲ್ಲಿಯೂ ಇರುವ ತಮ್ಮ ಸೋದರಿಯರನ್ನು ನಮ್ಮ ಗರ್ಲ್ ಗೈಡುಗಳು ಪತ್ರವ್ಯವಹಾರದ ಮುಖೇನ ತಿಳಿದುಕೊಳ್ಳಬಹುದು.

ಗೈಡಿಂಗ್ ಮಂಡಳಿಯಲ್ಲಿ ಈಗ ನಾಲ್ಕು ಶಾಖೆಗಳಿವೆ. ಈ ನಾಲ್ಕು ಶಾಖೆಗಳ ಮೂಲಕ ನಮ್ಮ ಸಂಸ್ಥಾನದಲ್ಲಿ ಎಲ್ಲ ವಯಸ್ಸಿನ ಎಲ್ಲ ಹುಡುಗಿಯರೂ ಕೂಡ ಈ ಗೈಡಿಂಗ್ ಸಂಸ್ಥೆಗೆ ಸೇರಬಹುದು. ಏಳು ವರುಷದಿಂದ ಹನ್ನೊಂದು ವರುಷದವರಿಗಿನ ಬಾಲಕಿಯರಿಗೆ "ಬ್ಲೂ ಬರ್ಡ್" ಎಂದು ಹೆಸರು. ಅವರು "ಕೈನೀಡಿ ಸಹಾಯ ಮಾಡು" (Lend a Hand) ಎಂಬ ಆಟವನ್ನು ಆಡಬೇಕು. ಹನ್ನೊಂದನೆಯ ವಯಸ್ಸಿನಲ್ಲಿ ಅವಳಿಗೆ ಗೈಡ್ ಎಂಬ ಹೆಸರು ಬರುತ್ತೆ. ಹದಿನಾರು ವರುಷದ ನಂತರ ಅವಳು ರೇಂಜರ್ ಎಂಬ ಹೆಸರುಳ್ಳವಳಾಗಿ ಪೌರಸಾಮಾಜಿಕ ಕರ್ತವ್ಯದಲ್ಲಿ ನಿರತಳಾಗಬಹುದು. ಕೇಡೆಟ್ ರೇಂಜರುಗಳನ್ನು (Cadet Rangers) ಕಾಲೇಜುಗಳಲ್ಲಿಯೂ ಹೈ ಸ್ಕೂಲುಗಳಲ್ಲಿಯೂ ಕಾಣಬಹುದು. ಅವರು ಮುಂದಿನ ಗೈಡರುಗಳಾಗುತ್ತಾರೆ. ಪ್ರತಿಯೊಂದು ಡಿಸ್ಟ್ರಿಕ್ಟುಗಳಿಗೂ ಏರ್ಪಡಿಸಿದ ಸಣ್ಣ ಕ್ಯಾಂಪುಗಳು ಗೈಡ್ ಮಂಡಳಿಯಲ್ಲಿ ಆಸಕ್ತಿಯನ್ನೂ ಹೆಚ್ಚಿಸುವುದಲ್ಲದೆ ಗೈಡಿಂಗಿನ ದರ್ಜೆಯನ್ನೂ ಸಹ ಹೆಚ್ಚಿಸುತ್ತದೆ.

ಹೆಡ್‌ಕ್ವಾರ್ಟ್ಸಿನಲ್ಲಿ ಗೈಡ್ ಅಂಗಡಿಯನ್ನು 1932ನೆಯ ಇಸ್ವಿಯಲ್ಲಿ ಸ್ಥಾಪಿಸಲಾಯಿತು. ಈಚೆಗೆ ಅದು ಬಹಳ ಅಭಿವೃದ್ಧಿಯನ್ನು

ಹೊಂದಿದೆ. ಗೈಡುಗಳಿಗೆ ಬೇಕಾಗುವಂಥ ಸಕಲಸಾಮಾನುಗಳನ್ನೂ ಪ್ರತಿಯೊಬ್ಬ ಗೈಡುಗಳಿಗೂ ಸಿಕ್ಕುವಂತೆ ಮಾಡುವುದೇ ನಮ್ಮ ಪ್ರಯತ್ನದ ಉದ್ದೇಶವಾಗಿದೆ. ಗೈಡಿಂಗ್ ಉಡುಪನ್ನು (Uniform) ನಮ್ಮ ಅಸೋಷಿಯೇಷನ್ನಿಗೋಸ್ಕರವಾಗಿ ಇಲ್ಲಿಯೇ ನೇಯಿಸಿದ್ದಾಗಿದೆ. ವರ್ಷಕ್ಕೊಮ್ಮೆ ಬ್ಯಾಡ್ಜುಗಳನ್ನೂ, ಪುಸ್ತಕಗಳನ್ನೂ ಮತ್ತು ಗೈಡ್ ಅಂಗಡಿಗೆ ಬೇಕಾದ ಸಾಮಗ್ರಿಗಳನ್ನು ಇಂಗ್ಲೆಂಡಿನಿಂದ (Guide Shop) ತರಿಸುತ್ತೇವೆ. ಅದರಿಂದ ನಮಗೆ ಖರೀದಿಯಲ್ಲಿ ಸುಲಭವಾಗುವುದಲ್ಲದೆ ನಮಗೆ ತೊಂದರೆಯನ್ನು ಕೂಡ ತಪ್ಪಿಸುತ್ತದೆ. ಅನೇಕ ಪೆಟ್ರೋಲ್ ಬಣ್ಣಗಳು (Patrol Colours) ಮತ್ತು ಗುರುತು (Emblem) ಗಳು ಕಸೂತಿ ಯನ್ನು ಇಲ್ಲಿಯೇ ಹಾಕಿದ್ದಾದುದರಿಂದ ಅವು ಬಹಳ ಸುಲಭ ಖರೀದಿಗೆ ದೊರೆಯುತ್ತವೆ. ಇತರ ಎಲ್ಲ ಸಾಮಾನುಗಳನ್ನು ನಮಗೆ ಹತ್ತಿರವಿರುವ ಮದರಾಸು ಗೈಡ್ ಅಂಗಡಿ (Madras Guide Shop) ಯಿಂದ ತರಿಸಲಾಗುತ್ತೆ. ಮೈಸೂರು ದೇಶದಲ್ಲಿ ಟೆಂಡರ್ ಪುಟ್ ಬ್ಯಾಡ್ಜುಗಳಿಗೆ ನಮ್ಮ ದೇಶದ ಧ್ವಜವಾದ ಗಂಡು ಬೇರುಂಡ ಪಕ್ಷಿಯ ಚಿತ್ರವನ್ನು ಹಾಕಲು ನಮಗೋಸ್ಕರವೇ ಪ್ರತ್ಯೇಕವಾಗಿ (Special) ಅಪ್ಪಣೆಯನ್ನು ಕೊಟ್ಟಿರುತ್ತಾರೆ.

ಈ ಮಂಡಳಿಯಲ್ಲಿ ನಿರಂತರವಾದ ಆಸಕ್ತಿಯನ್ನೂ ತೋರಿಸುತ್ತಿರುವ ನಮ್ಮ ಶ್ರೀಮದ್ಯುವರಾಣಿಯವರಿಗೆ ನಮ್ಮ ಹೃದಯ ಪೂರ್ವಕ ವಂದನೆಗಳನ್ನು ಅರ್ಪಿಸದೆ ಈ ರಿಪೋರ್ಟನ್ನು ಕೊನೆಗಾಣಿಸಲಾರೆವು. ಈ ಮಂಡಳಿಯ ಪುರೋಭಿವೃದ್ಧಿಯಲ್ಲಿ ತುಂಬಾ ಆಸಕ್ತಿಯನ್ನು ತೋರಿಸಿ ಇದು ಅಭಿವೃದ್ಧಿಗೆ ಬರಲು ಸಹಾಯ ಮಾಡಿರುವವರು ನಮ್ಮ ಚೀಫ್ ಕಮಿಷನರ್‌ರಾದ ಲೇಡಿ ಮಿರ್ಜಾ ಇಸ್ಮೇಯಿಲ್‌ರವರು. ಈ ಸಂಸ್ಥಾನದಲ್ಲಿ ಈ ಮಂಡಳಿಯೂ ಇಷ್ಟು ಅಭಿವೃದ್ಧಿಗೆ ಬರಲು ಅವರೇ ಕಾರಣರು. ಇವರ ನೇತೃತ್ವದಲ್ಲಿ ಮತ್ತು ಇವರ ಮಾರ್ಗ ದರ್ಶಿತ್ವದಲ್ಲಿ ಈ ಮಂಡಳಿಯು ಇಷ್ಟು ಅಭಿವೃದ್ಧಿಗೆ ಬರಲು ಅನುಕೂಲವಾಯಿತು. ನಾವು ನಮ್ಮ ವಂದನೆಗಳನ್ನು ಅವರಿಗೆ ಅರ್ಪಿಸುತ್ತೇವೆ.

ನಮಗೆ ಕೊಡುತ್ತಿದ್ದ 2,800 ರೂಪಾಯಿಗಳ ವಾರ್ಷಿಕ ಸಹಾಯವನ್ನು ಮುಂದುವರಿಸಿದ್ದಕ್ಕೋಸ್ಕರ ನಮ್ಮ ಘನ ಸರ್ಕಾರಕ್ಕೆ ನಮ್ಮ ವಂದನೆಗಳು. ಬಾಯ್ ಸ್ಕೌಟ್ ಅಸೋಸಿಯೇಷನ್ನಿನಿಂದ ನಮಗೆ ಬೇಕಾದಾಗ

ಲೆಲ್ಲ ಅವರ ಸಹಾಯವು ದೊರೆತಿದೆ. ಅಲ್ಲದೆ ನಮ್ಮ ಗೈಡ್ ಕಂಪೆನಿಗಳಲ್ಲಿ ಹಂಚಲು ಅವರು ಕೆಲವು ಬಾಯ್ ಸ್ಕೌಟ್ ಮಾಸಪತ್ರಿಕೆಗಳನ್ನು ಕೂಡ ಕಳುಹಿಸಿಕೊಟ್ಟಿರುತ್ತಾರೆ.

ನಮ್ಮ ಆನರೆರಿ ಟ್ರೈನರ್ (Honarary Trainer) ಮತ್ತು ಅಡ್ವೈಸರ್ (Adviser) ಮತ್ತು ಕರೆಸ್‌ಪಾಂಡೆಂಟ್ ಸೆಕ್ರಿಟೆರಿಯುವರೂ (Correspondent Secretary) ಆದ ಮಿಸೆಸ್ ರೋರವರು (Mrs. A. V. Rowe) ರವರು ನಾವು ಕೇಳಿದ ಸಹಾಯವನ್ನು ಶ್ರಮಗಣನೆ ಇಲ್ಲದೆ ನೀಡಿರುತ್ತಾರೆ. ಕಳೆದ ಎರಡು ವರ್ಷಗಳಿಂದಲೂ ಒಂದೇ ಉತ್ಸಾಹದಿಂದ ಅವರು ಕೆಲಸ ಮಾಡಿರುತ್ತಾರೆ, ನಮ್ಮ ಮಂಡಳಿಯು ಇಷ್ಟು ಮುಂದುವರಿಯಲು ಅವರೇ ಕಾರಣರು. ಅವರ ಸಹಾಯವು ಸ್ತುತ್ಯಾರ್ಹವಾದುದು.

ಇಂಡಿಯಾದೇಶದ ಜನರಲ್ ಸೆಕ್ರಿಟೆರಿಯವರಿಗೂ (The General Secretary for India) ಮತ್ತು ಅಂಗಡಿಗಳ ಸೆಕ್ರಿಟೆರಿಯವರುಗಳಿಗೂ (Shop Secretaries) ಕೂಡ ಅವರು ಕೊಟ್ಟ ಸಲಹೆಗಳಿಗೂ ಮತ್ತು ನೀಡಿದ ಸಹಾಯುಗಳಿಗೂ ನಮ್ಮ ಕೃತಜ್ಞತಾಪೂರ್ವಕವಾದ ವಂದನೆಗಳು.

ನಮ್ಮ ಸಂಸ್ಥಾನದ ವಿದ್ಯಾಭ್ಯಾಸದ ಇಲಾಖೆಗೂ ಮತ್ತು ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ (Director of Public Instruction) ರವರಿಗೂ ಕೂಡ ಅವರು ನಮಗೆ ಬೇಕಾದ ಸಮಯುಗಳಲ್ಲಿ ಅಮೋಘವಾದ ಸಹಾಯುವನ್ನು ಮಾಡಿದ್ದಕ್ಕೋಸ್ಕರ ನಮ್ಮ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಅರ್ಪಿಸುತ್ತೇವೆ.

ತಮಗೆಲ್ಲ ದೇಹಶ್ರಮವಾದರೂ ಗಣಿಸದೆ ಈ ಮಂಡಳಿಯ ಪುರೋಭಿವೃದ್ಧಿಗೋಸ್ಕರ ಪ್ರಯತ್ನಪಡುತ್ತಿರುವ ನಮ್ಮ ಕಮಿಟಿ ಮೆಂಬರುಗಳಿಗೂ, ಕಮಿಷನರುಗಳಿಗೂ, ಪ್ರೆಸಿಡೆಂಟರುಗಳಿಗೂ ಮತ್ತು ಲೋಕಲ್ ಅಸೋಸಿಯೇಷನ್ ಮೆಂಬರುಗಳಿಗೂ ಕೂಡ ನಮ್ಮ ಕೃತಜ್ಞತಾಪೂರ್ವಕವಾದ ವಂದನೆಗಳು.

ನಮ್ಮ ಫಾರಂಗಳನ್ನೂ, ಪರೀಕ್ಷಾಪತ್ರಗಳನ್ನೂ ಮತ್ತು ನಮ್ಮ ಮಂಡಳಿಯ ಇತರ ಸಾಹಿತ್ಯಗಳನ್ನು ಕನ್ನಡದಲ್ಲಿ ತರ್ಜುಮೆಮಾಡಿ ಕೊಟ್ಟಿದ್ದಕ್ಕೋಸ್ಕರ ಹೈ ಕೋರ್ಟು ಆಫೀಸಿನಲ್ಲಿರುವ ಮ॥ ರಾ॥ ವಿ. ನರಸಿಂಹ

ಮೂರ್ತಿ, ಎಮ್.ಎ., ಎಲ್ಎಲ್.ಬಿ. ಯವರಿಗೂ, ಉರ್ದು ಭಾಷೆಯಲ್ಲಿ ತರ್ಜುಮೆ ಮಾಡಿಕೊಟ್ಟದ್ದಕ್ಕೋಸ್ಕರ ಬೆಂಗಳೂರು ಬಾಯ್ ಸ್ಕೌಟ್ ಅಸೋಸಿಯೇಷನ್ನಿನ ಮ॥ ರಾ॥ ಅಬ್ದುಲ್ ಗಫಾರ್ರವರಿಗೂ ನಮ್ಮ ವಂದನೆಗಳು.

ನಮಗೆ ಸಮಯದಲ್ಲಿ ಸಲಹೆಗಳನ್ನೂ ಮತ್ತು ಉತ್ತೇಜನವನ್ನೂ ಕೊಟ್ಟ ನಮ್ಮ ಸ್ನೇಹಿತರುಗಳಿಗೆ ನಮ್ಮ ಅತ್ಯಂತ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಅರ್ಪಿಸಿ ಈ ವರದಿಯನ್ನು ಮುಗಿಸುತ್ತೇನೆ.

ಮಿಸೆಸ್ ಎಸ್. ರಾಘವಾಚಾರಿ,
ಗೌರವ ಕಾರ್ಯದರ್ಶಿ.

ಟ್ರೈನಿಂಗ್ ಮತ್ತು ಕ್ಯಾಂಪಿಂಗ್ ವಿಚಾರವಾಗಿ ರಿಪೋರ್ಟು.

1933ನೆಯ ಜನವರಿಯಲ್ಲಿ ಬೆಂಗಳೂರಿನಲ್ಲಿ ಲೀಡರ್‌ಗಳಿಗೋಸ್ಕರವಾಗಿ ಒಂದು ಟ್ರೈನಿಂಗ್ ಕ್ಯಾಂಪನ್ನು ಏರ್ಪಡಿಸಿತ್ತು. ಅಲ್ಲಿ ಸುಮಾರು 60 ಜನ ಗೈಡರ್‌ಗಳು ತರಬೇತಾದರು. ಈ ಟ್ರೈನಿಂಗ್ ಕ್ಯಾಂಪಿನ ಕೊನೆಯ ದಿವಸ ಒಂದು ರ್‍ಯಾಲಿಯು ನಡೆಯಿತು. ಆಗ ಗರ್ಲ್ ಗೈಡ್ ಕಂಪೆನಿಗಳು ಚೀಫ್ ಕಮಿಷನರವರಿಂದ ಎನ್ರೋಲ್ (Enrol) ಮಾಡಲ್ಪಟ್ಟುವು. ಚೀಫ್ ಕಮಿಷನರವರು ವಂದನೆಗಳನ್ನು (Salute) ಸ್ವೀಕರಿಸಿದರು.

ಮಿಸೆಸ್ ರೋರವರು (Mrs. Rowe) ಮೈಸೂರಿನಲ್ಲಿ 1933ನೆಯ ಜುಲೈ 1ನೆಯ ತಾರೀಖಿನಿಂದ 8ನೆಯ ತಾರೀಖಿನವರಿಗೆ ಸುಮಾರು 50 ಜನ ಗೈಡರುಗಳಿಗೆ ತರಬೇತು ಕೊಟ್ಟರು. ಕೊನೆಯ ದಿವಸ ಒಂದು ರ್‍ಯಾಲಿಯು ಏರ್ಪಡಿಸಲ್ಪಟ್ಟಿತ್ತು.

1933ನೆಯ ಸೆಪ್ಟೆಂಬರ್ 9ನೆಯ ತಾರೀಖಿನಿಂದ 16ನೆಯ ತಾರೀಖಿನವರಿಗೆ, ತುಮಕೂರಿನಲ್ಲಿ ಡಾಕ್ಟರ್ ಮಿಸೆಸ್ ಹಿಲ್ ಮತ್ತು ಮಿಸ್ ಪಾರ್‌ರವರ ನೇತೃತ್ವದಲ್ಲಿ ಕೆಲವರಿಗೆ ಕನ್ನಡ ಮತ್ತು ಉರ್ದು ಭಾಷೆಯಲ್ಲಿ ತರಬೇತು ಕೊಡಲ್ಪಟ್ಟಿತು. ತಿಪಟೂರು, ಮಧುಗಿರಿ ಮತ್ತು ಸಿರಾದ ಉಪಾಧ್ಯಾಯಿನಿಯರೂ, ಮತ್ತು ಸುಮಾರು 20 ಜನ ಸ್ಕೂಲುಗಳ ಉಪಾಧ್ಯಾಯಿನಿಯರೂ ಮತ್ತು ಗೈಡರುಗಳೂ ಮತ್ತು 6 ಜನ ಉರ್ದು ಸ್ಕೂಲಿನ ಉಪಾಧ್ಯಾಯಿನಿಯರು ತರಬೇತಾದರು.

1933ನೆಯ ನವೆಂಬರ್ 1ನೆಯ ತಾರೀಖಿನಿಂದ 8ನೆಯ ತಾರೀಖಿನವರಿಗೆ ಮಿಸೆಸ್ V. ರೋರವರು ಕೋಲಾರ್ ಗೋಲ್ಡ್ ಫೀಲ್ಡ್ಸ್‌ನಲ್ಲಿ, ತಮಿಳು ಮತ್ತು ಇಂಗ್ಲೀಷಿನಲ್ಲಿ ತರಬೇತು ಕೊಡಲು ಒಂದು ಕ್ಯಾಂಪನ್ನು

ಏರ್ಪಡಿಸಿದ್ದರು. ರಾಬರ್ಟ್ಸನ್‌ಪೇಟೆ, ಬೌರಿಂಗ್‌ಪೇಟೆ ಮತ್ತು ಕೋಲಾರ್ ಗೋಲ್ಡ್ ಫೀಲ್ಡ್ಸ್‌ನ ಇತರ ಕಡೆಗಳಿಂದ ಸುಮಾರು 20 ಜನ ಉಪಾಧ್ಯಾಯಿನಿಯರು ಬಂದಿದ್ದರು.

ಆರು ಡಿಸ್ಟ್ರಿಕ್ಟುಗಳಲ್ಲಿ ಟ್ರೈನಿಂಗ್‌ಕ್ಯಾಂಪುಗಳು ಏರ್ಪಡಿಸಲ್ಪಟ್ಟಿದ್ದವು. ಅನೇಕ ಗೈಡರುಗಳು ತರಬೇತಾದರು. ಇನ್ಯಾವರೀತಿಯಲ್ಲಿಯೂ ಗೈಡರುಗಳಿಗೆ ಈ ತರಹ ಶಿಕ್ಷಣವು ದೊರೆಯದೆ ಇರುವುದರಿಂದ ಈ ಟ್ರೈನಿಂಗ್ ಕ್ಯಾಂಪುಗಳು ಅವರಿಗೆ ಬಹಳ ಉಪಯೋಗವನ್ನುಂಟುಮಾಡಿದೆ.

1934ನೆಯ ಸೆಪ್ಟೆಂಬರ್ ತಿಂಗಳಲ್ಲಿ ಉರ್ದು ಉಪಾಧ್ಯಾಯಿನಿಯರಿಗೆ ಶಿಕ್ಷಣವನ್ನು ಕೊಡಲು ಬೆಂಗಳೂರು ಉರ್ದು ಗರ್ಲ್ಸ್ ಸ್ಕೂಲಿನಲ್ಲಿ ಒಂದು ಕ್ಯಾಂಪು ಏರ್ಪಡಿಸಲ್ಪಟ್ಟಿತ್ತು. ಬೆಂಗಳೂರು ಡಿಸ್ಟ್ರಿಕ್ಟಿನ ಸುಮಾರು 20 ಜನ ಉಪಾಧ್ಯಾಯಿನಿಯರು ಶಿಕ್ಷಣವನ್ನು ಪಡೆದರು. ಮಿಸ್ ಬಿ. ಪಾಲ್‌ರವರು ಉರ್ದು ಭಾಷೆಯಲ್ಲಿಯೇ ಶಿಕ್ಷಣವನ್ನು ಕೊಟ್ಟರು.

ಹೆಬ್ಬಾಳಿನಲ್ಲಿ ಶಿಕ್ಷಣದಕ್ಷರಾದ ಮತ್ತು ಹೆಬ್ಬಾಳ್ ಮಿಲಿಟೆರಿ ಕ್ಯಾಂಪಿಗೆ ಪ್ರೆಸಿಡೆಂಟರಾದ ಮಿಸೆಸ್ ಜೆ. ಸಿ. ಲಾಕ್‌ರವರು 60 ಜನ ಗೈಡುಗಳಿಗೂ ಬ್ಲೂ ಬರ್ಡ್‌ಗಳಿಗೂ ತಪ್ಪದೆ ಪ್ರತಿ ಬುಧವಾರವೂ ಶಿಕ್ಷಣವನ್ನು ಕೊಟ್ಟರು.

ತುಮಕೂರು, ಶಿವಮೊಗ್ಗ, ಹಾಸನ ಮತ್ತು ಕೋಲಾರ್ ಗೋಲ್ಡ್ ಫೀಲ್ಡ್ಸ್ ಈ ಡಿಸ್ಟ್ರಿಕ್ಟುಗಳಲ್ಲಿ ಟ್ರೈನಿಂಗ್ ಕ್ಯಾಂಪುಗಳು ಏರ್ಪಡಿಸಲ್ಪಟ್ಟಿದ್ದವು. ದೇಶಭಾಷೆಯಲ್ಲಿ ಶಿಕ್ಷಣವನ್ನು ಕೊಟ್ಟಿದುದರಿಂದ ಅನೇಕ ಗೈಡ್ಸುಗಳು ಪ್ರಯೋಜನವನ್ನು ಹೊಂದಿದರು.

1934ನೆಯ ನವೆಂಬರ್ 21ನೆಯ ತಾರೀಖಿನಿಂದ 28ನೆಯ ತಾರೀಖಿನವರಿವಿಗೆ, ದೇಶದ ಎಲ್ಲ ಗೈಡರ್‌ಗಳಿಗೂ ಕೂಡ, ಘನ ಸರ್ಕಾರದ ಅಪ್ಪಣೆಯಿಂದ ಬೆಂಗಳೂರಿನ ಕುಮಾರಾ ಪಾರ್ಕಿನಲ್ಲಿ ಆನರೆರಿ ಟ್ರೈನರ್ (Honarary Trainer) ಆದ ಮಿಸೆಸ್ ರೋ (Rowe) ರವರ ಚಾಲಕತ್ವದಲ್ಲಿ ಒಂದು ಟ್ರೈನಿಂಗ್ ಕ್ಯಾಂಪು ಏರ್ಪಡಿಸಲ್ಪಟ್ಟಿತ್ತು. ಸುಮಾರು 100–130 ಜನ ಗೈಡರುಗಳು ಶಿಕ್ಷಣವನ್ನು ಪಡೆದುಕೊಂಡರು.

ಬೆಂಗಳೂರಿನ ಮತ್ತು ಹೊರಗಿನ ಡಿಸ್ಟ್ರಿಕ್ಟ್‌ಗಳಿಂದ ಅನೇಕ ಜನ ಗೈಡರುಗಳು ಬಂದಿದ್ದರು. ಸಂಸ್ಥಾನದ ಎಲ್ಲಾ ಡಿಸ್ಟ್ರಿಕ್ಟ್ ಕಮಿಷನರುಗಳೂ ಕೂಡ ಈ ಕ್ಯಾಂಪಿನಲ್ಲಿ ಭಾಗವಹಿಸಲೋಸುಗವೇ ಬಂದಿದ್ದರು. ಮಿಸೆಸ್ ರೋರವರು, ಮಿಸ್ ಪಾಲ್, ಮಿಸ್ ಟಿನ್‌ಸ್ಲಿ ಮತ್ತು ಮಿಸ್ ಬೆರ್ಚೋರವರ ಸಹಾಯದಿಂದ ಕ್ಯಾಂಪಿನ ವಿಪರೀತ ಕಾರ್ಯಕ್ರಮಗಳನ್ನು ಶ್ಲಾಘನೀಯವಾಗಿ ಕೊನೆಗಾಣಿಸಿದರು. ಶಿಕ್ಷಣವು ಕನ್ನಡ, ಉರ್ದು ಮತ್ತು ಇಂಗ್ಲೀಷು ಭಾಷೆಗಳಲ್ಲಿ ಕೊಡಲ್ಪಟ್ಟಿತು.

ಮಿಸೆಸ್ ಮಿಲಿಸಿಯೆಂಟ್ ರೋ,
ಅನರೆರಿ ಟ್ರೈನರ್.

ಡಿಸ್ಟ್ರಿಕ್ಟು ಕಮಿಷನರುಗಳ ರಿಪೋರ್ಟು.

ಬೆಂಗಳೂರು ಡಿಸ್ಟ್ರಿಕ್ಟು.

ಡಿಸ್ಟ್ರಿಕ್ಟು ಗರ್ಲ್ ಗೈಡ್ ಅಸೋಸಿಯೇಷನ್.

ಇಲ್ಲಿ ಡಿಸ್ಟ್ರಿಕ್ಟು ಗರ್ಲ್ ಗೈಡ್ ಅಸೋಸಿಯೇಷನ್ 21-3-1933 ರಲ್ಲಿ ಸ್ಥಾಪಿತವಾಯಿತು. ಇದಕ್ಕೆ ಡಿಸ್ಟ್ರಿಕ್ಟು ಕಮಿಷನರು ಪ್ರೆಸಿಡೆಂಟ ರಾಗಿಯೂ, ಶ್ರೀಮತಿ ಎಸ್. ಜಾನಕಮ್ಮಾಳ್‌ರವರು ಆನರೆರಿ ಸೆಕ್ರಿಟೆರಿಯ ವರಾಗಿಯೂ, ಬೆಂಗಳೂರು ಸಿಟಿಯಲ್ಲಿನ ಕೆಲವು ಕಂಪೆನಿಗಳ ಕ್ಯಾಪ್ಟನ್‌ಗಳು ಮೆಂಬರುಗಳಾಗಿಯೂ ನೇಮಕವಾದರು. ಬೇಸಿಗೆಯ ರಜದಲ್ಲಿ ಶಾಲೆ ಗಳು ಮುಚ್ಚಿದಾಗ ಹೊರತು ಬಾಕಿ ಕಾಲಗಳಲ್ಲಿ ಈ ಅಸೋಸಿಯೇಷನ್ ತನ್ನ ಮೀಟಿಂಗುಗಳನ್ನು ತಪ್ಪದೆ ಸರಿಯಾಗಿ ನಡೆಸಿಕೊಂಡು ಬಂದಿತು. ನಾಲ್ಕು ಅವಸರದ ಸಂದರ್ಭಗಳ ಮೀಟಿಂಗುಗಳನ್ನೂ (Emergent Meetings) ಕೂಡ ಸೇರಿಸಲಾಯಿತು. ಈ ಮೀಟಿಂಗುಗಳಲ್ಲೆಲ್ಲ ಮೆಂಬ ರುಗಳು ಸರಿಯಾಗಿ ಹಾಜರಿದ್ದುದು ಸ್ತುತ್ಯಾರ್ಹವಾಗಿದೆ.

ಸಂಸ್ಥೆಯ ಬಲ.

ಪ್ರಾರಂಭದಲ್ಲಿ ಇಲ್ಲಿ ಎರಡೇ ಎರಡು ಗೈಡ್ ಕಂಪೆನಿಗಳಿದ್ದವು. ಆರು ಕಂಪನಿಗಳೂ ಮತ್ತು ಐದು ಬ್ಲ್ಯೂ ಬರ್ಡ್ ಫ್ಲಾಕುಗಳೂ ಹೊಸದಾಗಿ ಸೇರಿಸಲ್ಪಟ್ಟವು. ಹಾಲಿ 194 ಗರ್ಲ್ ಗೈಡುಗಳನ್ನು ಒಳಗೊಂಡ ಎಂಟು ಕಂಪೆನಿಗಳೂ ಮತ್ತು 95 ಬ್ಲ್ಯೂ ಬರ್ಡ್‌ಗಳನ್ನು ಒಳಗೊಂಡ ಐದು ಬ್ಲೂ ಬರ್ಡ್ ಫ್ಲಾಕುಗಳೂ ಇವೆ.

ಆರ್ಥಿಕ ಸ್ಥಿತಿ.

ಈ ಡಿಸ್ಟ್ರಿಕ್ಟು ಅಸೋಸಿಯೇಷನ್ನಿಗೆ ಹೆಡ್‌ಕ್ವಾರ್ಟರ್ಸಿನಿಂದ 50 ರೂಪಾಯಿಗಳ ಗ್ರಾಂಟು ದೊರೆಯಿತು. ಬೆಂಗಳೂರು ಸಿಟಿಯ ಮುನಿಸಿ

ಪಾಲಿಟಿಯಿಂದಲೂ ಮತ್ತು ಡಿಸ್ಟ್ರಿಕ್ಟು ಬೋರ್ಡಿನಿಂದಲೂ ಕೂಡ ತಲಾ ನೂರು ರೂಪಾಯಿಗಳ ಗ್ರ್ಯಾಂಟು ದೊರೆಯಿತು. ಕಂಪೆನಿಗಳಿಗೆ ಮತ್ತು ಫ್ಲಾಕುಗಳಿಗೆ ಬೇಕಾದ ಸಾಮಾನುಗಳಿಗೆ ಹಣವನ್ನು ಅವುಗಳ ಮೆಂಬರುಗಳೇ ಕೊಟ್ಟರು.

ಟ್ರೈನಿಂಗ್ ಕ್ಯಾಂಪುಗಳು.

1933ನೆಯ ಜನವರಿ ತಿಂಗಳಿನಲ್ಲಿ ಹೆಡ್‌ಕ್ವಾರ್ಟರಿನವರು ನಡೆಸಿದ ಟ್ರೈನಿಂಗ್ ಕ್ಯಾಂಪಿನಲ್ಲಿ ಗೈಡಿಂಗ್ ಪದ್ಧತಿಯಲ್ಲಿ ಆಸಕ್ತಿಯುಳ್ಳ ಅನೇಕ ಬೆಂಗಳೂರಿನ ಮಹಿಳೆಯರು ಶಿಕ್ಷಣವನ್ನು ಪಡೆದರು. 1934ನೆಯ ಸೆಪ್ಟೆಂಬರು ತಿಂಗಳಿನಲ್ಲಿ ಮಹಮ್ಮದೀಯ ಮಹಿಳೆಯರಿಗೆ ಶಿಕ್ಷಣವನ್ನು ಕೊಡಲು ಐದು ದಿವಸ ಒಂದು ಟ್ರೈನಿಂಗ್ ಕ್ಯಾಂಪನ್ನು ಡಿಸ್ಟ್ರಿಕ್ಟು ಅಸೋಷಿಯೇಷನ್ನಿನವರು ಏರ್ಪಡಿಸಿದ್ದರು. 18 ಜನ ಮಹಿಳೆಯರು ಬಂದಿದ್ದರು. ಶಿಕ್ಷಣವು ಮಿಸ್ ಬಿ. ಪಾಲ್‌ರವರಿಂದ ಕೊಡಲ್ಪಟ್ಟಿತು. ಈ ಕ್ಯಾಂಪಿಗೆ ನೆರೆದಿದ್ದ ಮಹಿಳೆಯರು ಆಸಕ್ತಿಯುಳ್ಳವರಾಗಿಯೂ ಶ್ರಮಸಹಿಷ್ಣುಗಳಾಗಿಯೂ ಇದ್ದರು: ಅವರೆಲ್ಲರೂ ಪರೀಕ್ಷೆಗಳಲ್ಲಿ ಉತ್ತಮ ದರ್ಜೆಯಲ್ಲಿ ತೇರ್ಗಡೆ ಹೊಂದಿದರು. ಈ ಮಹಿಳೆಯರನ್ನು ಚೀಫ್ ಕಮಿಷನರಾದ ಲೇಡಿ ಮಿರ್ಜಾ ಎಂ. ಇಸ್ಮಾಯಿಲ್‌ರವರೇ ಎನ್ರೋಲ್ (Enrol) ಮಾಡಿದರು. ಈ ಸಂದರ್ಭದಲ್ಲಿ ಅನೇಕ ಮಹಿಳೆಯರು ನೆರೆದಿದ್ದರು. ಈಗ ಅನೇಕ ಜನ ಮಹಿಳೆಯರು, ಅಂದರೆ ಉಪಾಧ್ಯಾಯಿನಿಯರೂ ಮತ್ತು ಇತರರೂ, ಕೂಡ ಈ ಮಂಡಲಿಗೆ ಸೇರುವುದಕ್ಕೋಸ್ಕರ ಶಿಕ್ಷಣವನ್ನು ಪಡೆಯಲು ಮುಂದುವರಿಯುತ್ತಿದ್ದಾರೆ.

ಡಿಸ್ಟ್ರಿಕ್ಟು ಕಮಿಷನರುಗಳ ಪರಿಶೀಲನೆ.

ಡಿಸ್ಟ್ರಿಕ್ಟು ಕಮಿಷನರುಗಳು ಎಲ್ಲ ಕಂಪೆನಿಗಳನ್ನು ಮತ್ತು ಫ್ಲಾಕುಗಳನ್ನೂ ಪರಿಶೀಲಿಸಿದ್ದಲ್ಲದೆ, ಈ ಕಾಲದಲ್ಲಿ ನಡೆದ ಎನ್ರೋಲ್‌ಮೆಂಟು (Enrolment) ಗಳನೇಕಗಳಲ್ಲಿ ಹಾಜರಿದ್ದರು.

ರಚನೆ.

ಕಂಪೆನಿಗಳ ಕ್ಯಾಪ್ಟನ್ನುಗಳು ಮತ್ತು ಫ್ಲಾಕುಗಳ ಬ್ರೌನ್ ಔಲ್‌ಗಳು ಕಳುಹಿಸಿರುವ ರಿಪೋರ್ಟುಗಳಿಂದ ಅವೆಲ್ಲವೂ ತೃಪ್ತಿಕರವಾಗಿ ನಡೆಯುತ್ತಿವೆ

ಯೆಂಬುದು ವ್ಯಕ್ತವಾಗುತ್ತದೆ. ಅನೇಕಾವರ್ತಿ ಕಂಪೆನಿಗಳನ್ನು ಅವುಗಳ ಮುಖ್ಯಸ್ಥರು ಹೊರಗಡೆ ಕರೆದುಕೊಂಡು ಹೋಗಿ ಪ್ರಕೃತಿಪಾಠ, ಪದಾನ್ವೇಷಣೆ ಮುಂತಾದುವುಗಳಲ್ಲಿ ಶಿಕ್ಷಣವನ್ನು ಕೊಟ್ಟಿರುತ್ತಾರೆ.

ಈ ಕಂಪೆನಿಗಳು ಕಳುಹಿಸಿರುವ ರಿಪೋರ್ಟಿನಲ್ಲಿ ಗಮನಿಸಬೇಕಾದ ಮುಖ್ಯ ವಿಷಯಗಳ್ಯಾವುವೆಂದರೆ :—

(a) ಮೊದಲನೆಯ ಕಂಪೆನಿಯು ಆರೋಗ್ಯದ ನಕ್ಷೆಯನ್ನು ತಯಾರು ಮಾಡಿದ್ದಲ್ಲದೆ ಗಂಟುಗಳ ಮತ್ತು ನಿಶಾನೆಗಳ ನಕ್ಷೆಗಳನ್ನೂ ತಯಾರಿಸಿದರು.

(b) ಏಳನೆಯ ಕಂಪೆನಿಯಲ್ಲಿನ ಹನ್ನೆರಡು ಜನ ಗೈಡುಗಳು ಎರಡನೆಯ ದರ್ಜೆಯ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಅವರೆಲ್ಲರೂ ಮೊದಲನೆಯ ದರ್ಜೆಯ ಪರೀಕ್ಷೆಯಲ್ಲಿ ಉತ್ತೀರ್ಣರಾಗುವುದಕ್ಕೂ, ಪ್ರೊಫಿಷಿಯನ್ಸಿ ಬ್ಯಾಡ್ಜುಗಳನ್ನು ಪಡೆಯುವುದಕ್ಕೂ ತುಂಬಾ ಪ್ರಯತ್ನಪಡುತ್ತಿದ್ದಾರೆ. ಈ ಕಂಪೆನಿಯು ತಮಗೆ ಬೇಕಾದ ಅನುಕೂಲಗಳನ್ನು ಕಲ್ಪಿಸಿಕೊಳ್ಳಲು ಬೇಕಾಗುವ ಹಣವನ್ನು ಒದಗಿಸಿಕೊಳ್ಳಲು ಒಂದು ಸಂಗೀತ ಕಚೇರಿ (Concert) ಯನ್ನು ಏರ್ಪಡಿಸಿತ್ತು. ನಮ್ಮ ಹುಡಗಿಯರು ಬುದ್ಧಿಕುಶಲರೆಂಬುದನ್ನು ತೋರಿಸುವಂತಹ ಒಂದು ಸಂದರ್ಭವು ಹೋದವರ್ಷ ನಡೆಯಿತು. ಒಬ್ಬ ಹುಡುಗಿಗೆ ಬ್ಲ್ಯೂ ಬರ್ಡ್ ಬಟ್ಟೆಗಳಿಲ್ಲದೆ ಇದ್ದುದರಿಂದಲೂ, ಕೊಳ್ಳಲು ಹಣವಿಲ್ಲದೆ ಇದ್ದುದರಿಂದಲೂ, ಅವಳು ಬಹಳ ದುಃಖದಿಂದ ತಮ್ಮ ಫ್ಲಾಕನ್ನು ಬಿಡುತ್ತೇನೆ ಎಂದು ಹೇಳಿದಳು. ಇತರ ಹುಡುಗಿಯರು ಈ ದುಃಖಕರದಾದ ವಿಷಯವನ್ನು ಕೇಳಿ ತಮ್ಮ ತಮ್ಮೊಳಗೆ ಮಾತನಾಡಿಕೊಂಡು, ಪ್ರತಿಯೊಬ್ಬಳೂ ತನ್ನ ಕೈಲಾದಷ್ಟು ದುಡ್ಡನ್ನು ಕೊಡಿಸಿ ಕೊಡಬೇಕೆಂದು ನಿರ್ಧರಿಸಿದರು. ಅದರಂತೆ ಮುಂದಿನ ಸಮ್ಮೇಳನದ ದಿವಸ ಪ್ರತಿಯೊಬ್ಬ ಬ್ಲೂ ಬರ್ಡೂ ಕೂಡ ಕೆಲವು ಆಣೆಗಳನ್ನು ತಂದಿದ್ದಳು. ಏತಕ್ಕೆಂದು ಕೇಳುವಲ್ಲಿ, ಅವರೆಲ್ಲರೂ ಸೇರಿ ಆ ಹುಡುಗಿಯ ಬ್ಲ್ಯೂ ಬರ್ಡ್ ಬಟ್ಟೆಗಳಿಗೆಂದು ಹೇಳಿದರು. ನಂತರ ಬಹಳ ಸಂತೋಷದಿಂದ ಹೋಗಿ ಆ ಹುಡಗಿಯನ್ನು ಕರೆತಂದರು. ಆ ಹುಡಗಿಯು ತನ್ನ ಜೀವಮಾನ ಕಾಲದಲ್ಲಿ ಆಗಿನ ಸಂದರ್ಭದಷ್ಟು ಸಂತೋಷವನ್ನು ಮತ್ಯಾವಾಗಲೂ ಪಡೆಯಲಿಲ್ಲವೆಂದು ಖಂಡಿತವಾಗಿ ಹೇಳಬಲ್ಲೆವು. ಈ ಸಂದ

ರ್ಭವು ಯಾವ ಕಂಪೆನಿಗಾದರೂ ಕೀರ್ತಿಯನ್ನು ತರುವುದಾಗಿದೆ. ಈ ಬುದ್ಧಿಯು ಬ್ಲೂ ಬರ್ಡ್‌ಗಳಲ್ಲಿಯೇ ಹುಟ್ಟಿದ್ದುದನ್ನು ನೋಡಿದರೆ, ಈ ಮಂಡಳಿಯ ಉದ್ದೇಶಗಳು ಅವರ ಮನಸ್ಸಿನಲ್ಲಿ ಸಂಪೂರ್ಣವಾಗಿ ನಾಟಿವೆ ಯೆಂದು ತೋರುತ್ತದೆ.

(c) ಎರಡನೆಯ ಕಂಪೆನಿಯು ನಾಲ್ಕು ಪೆಟ್ರೋಲುಗಳಾಗಿ ವಿಂಗಡವಾಗಿದೆ. ಗೈಡುಗಳಲ್ಲಿ ಜಾಗ್ರತೆಯನ್ನು ಹೆಚ್ಚಿಸಲು ಪ್ರತಿವಾರವೂ ಸಂತೋಷಕೂಟ ಅಥವಾ ರ್‍ಯಾಲಿಗಳನ್ನು ಏರ್ಪಡಿಸಿದ್ದಲ್ಲದೆ, ಪ್ರತಿ ಪೆಟ್ರೋಲುಗಳಿಗೂ ಅವರು ಮಾಡಿದ ಕೆಲಸಗಳಿಗನುಗುಣವಾಗಿ ನಂಬರುಗಳು ಕೊಡಲ್ಪಟ್ಟುವು. ಹೆಚ್ಚು ನಂಬರುಗಳನ್ನು ಪಡೆದ ಪೆಟ್ರೋಲೊಂದಕ್ಕೆ ಒಂದು ಗುರಾಣಿ (Shield) ಯನ್ನು ಪಾರಿತೋಷಿಕವಾಗಿ ಕೊಟ್ಟೆವು. ಹೋದವರ್ಷ ಜಿನ್ನಿಯ ಪೆಟ್ರೋಲಿಗೆ (Zinnia Patrol) ಗುರಾಣಿಯು ದೊರಕಿತು. ಈ ಕಂಪೆನಿಯು ಬೆಂಗಳೂರಿನಲ್ಲಿ ನಡೆದ ಶಿಕ್ಷಣ ಪ್ರದರ್ಶನ (Educational Exhibition) ದಲ್ಲಿ ಮೊದಲನೆ ತರಗತಿಯ ಸರ್ಟಿಫಿಕೇಟನ್ನು ಪಡೆಯಿತು.

(d) ಆರನೆಯ ಕಂಪೆನಿಯು ಪದಾನ್ವೇಷಣೆಯಲ್ಲಿ ಒಳ್ಳೆಯ ಮೆಹನತ್ತನ್ನು ಮಾಡಿತು.

(e) ಅನೇಕ ಕಂಪೆನಿಗಳಲ್ಲಿ ಗೈಡುಗಳು ಎರಡನೆಯ ತರಗತಿಯ ಪರೀಕ್ಷೆಗೆ ಕೂರಲು ತಯಾರಾಗಿ, ಪರೀಕ್ಷೆಗೋಸ್ಕರ ಕಾದು ಸಿದ್ಧರಾಗಿದ್ದಾರೆ.

ರ್‍ಯಾಲಿಗಳು ಮತ್ತು ಕ್ಯಾಂಪುಗಳು.

1933ನೆಯ ಸೆಪ್ಟೆಂಬರು ತಿಂಗಳಲ್ಲಿ ಡಿಸ್ಟ್ರಿಕ್ಟು ಅಸೋಸಿಯೇಷನ್ನಿನ ಪರವಾಗಿ ಲಾಲ್‌ಬಾಗಿನಲ್ಲಿ ಒಂದು ಸಂತೋಷಕೂಟ (Rally) ವು ಏರ್ಪಡಿಸಲ್ಪಟ್ಟಿತು. ಬೆಂಗಳೂರಿನ ಸುಮಾರು 160 ಜನ ಹುಡುಗಿಯರು ಬಂದಿದ್ದರು. ಚೀಫ್ ಗೈಡರ ಮುಂದೆ ಗರ್ಲ್ ಗೈಡ್ ಹೆಡ್‌ಕ್ವಾರ್ಟರಿನ ಶಂಕುಸ್ಥಾಪನೋತ್ಸವ ಸಮಯದಲ್ಲಿ ಗರ್ಲ್ ಗೈಡರು ತಮ್ಮ ಆಟ ಪ್ರದರ್ಶನವನ್ನು ತೋರಿಸಿದರು. 1934ನೆಯ ಸೆಪ್ಟೆಂಬರು ತಿಂಗಳಲ್ಲಿ ಹೊಸಕೋಟೆಯಲ್ಲಿ ಒಂದು ಸಂತೋಷಕೂಟವು ನಡೆಯಿತು. ಸುಮಾರು 200 ಜನಗಳು ಬಂದಿದ್ದರು. ಎಲ್ಲಾ ಕಂಪೆನಿಗಳ ಕ್ಯಾಪ್ಟರ್ಗಳೂ ಕೂಡ ತಮ್ಮ

ಕಂಪೆನಿಗಳನ್ನು ಕ್ಯಾಂಪಿಗೆ ಕರೆದುಕೊಂಡು ಹೋಗಿದ್ದರು. ಈ ಸಂತೋಷ ಕೂಟಗಳು ಮತ್ತು ಪ್ರದರ್ಶನಗಳು ಕಂಪೆನಿಗಳಲ್ಲಿ ಸ್ಪರ್ಧೆ ಭಾವವನ್ನು ಹೆಚ್ಚಿಸಿದ್ದುವಲ್ಲದೆ ಸಾಮಾನ್ಯ ಜನಗಳಲ್ಲಿ ಈ ಗರ್ಲ್ ಗೈಡ್ ಮಂಡಲಿಯ ಉದ್ದೇಶಗಳಲ್ಲಿ ಹೆಚ್ಚು ಆಸಕ್ತಿಯನ್ನುಂಟುಮಾಡಿವೆ.

ಸಾಮಾನ್ಯ ವಿಷಯಗಳು.

ಗೈಡುಗಳು ಈ ಮಂಡಲಿಯ ನಿಜವಾದ ಉದ್ದೇಶಗಳನ್ನು ಚೆನ್ನಾಗಿ ಗಮನಿಸಿರುತಾರೆಂಬುದನ್ನು ತಿಳಿಸಲು ಸಂತೋಷವಾಗುತ್ತದೆ. ಅಧೈರ್ಯ ಸ್ಥೆಯರಾದ ಮತ್ತು ಸ್ವಾವಲಂಬನೆಯಿಲ್ಲದ ಹುಡುಗಿಯರು ಸ್ವಾವಲಂಬನೆ ಯುಳ್ಳವರಾಗಿಯೂ, ಜಗಳಗಂಟಿಗರಾದ ಮತ್ತು ಮುಂಗೋಪಿಗಳಾದ ಹುಡುಗಿಯರು ಸ್ಥಿಮಿತ ಬುದ್ಧಿಯುಳ್ಳವರಾಗಿಯೂ, ಎಲ್ಲ ಗೈಡುಗಳೂ ಕೂಡ ಸಂತೋಷ ಚಿತ್ತರಾಗಿಯೂ, ಸೋದರಿ ಭಾವವುಳ್ಳವರಾಗಿಯೂ, ಸೇವೆ ಮಾಡುವವರಾಗಿಯೂ ಇದ್ದಾರೆ.

ವಂದನೆಗಳು.

ಈ ಮಂಡಲಿಗೋಸ್ಕರ ಸಹಾಯಮಾಡಿದ ಜನಗಳಿಗೂ, ವಿದ್ಯಾಭ್ಯಾಸದ ಇಲಾಖೆಯವರಿಗೂ ಮತ್ತು ಖಾಸಗಿ ಜನಗಳಿಗೂ, ಅವರಿಂದ ಪಡೆದ ಉಪಕಾರಗಳಿಗೋಸ್ಕರ ನಮ್ಮ ಮನಃಪೂರ್ವಕವಾದ ವಂದನೆಗಳನ್ನು ಅರ್ಪಿಸುತ್ತೇವೆ. ಮುಖ್ಯವಾಗಿ (1) ನಮಗೆ ಕೇಳಿದಾಗ ನೆರವಾದ ನಮ್ಮ ಚೀಫ್ ಕಮಿಷನರಾದ ಲೇಡಿ ಮಿರ್ಜಾ ಎಂ. ಇಸ್ಮಾಯಿಲ್‌ರವರಿಗೂ ಮತ್ತು (2) ಅಸೋಸಿಯೇಷನ್ನಿನ ಆನರೆರಿ ಸೆಕ್ರೆಟೆರಿಯವರಿಗೂ, ಕಂಪೆನಿಗಳ ಕ್ಯಾಪ್ಟನ್‌ಗಳಿಗೂ ಮತ್ತು ಫ್ಲಾಕುಗಳ ವೈಸ್ ಬರ್ಡ್‌ಗಳಿಗೂ ನಮ್ಮ ವಂದನೆಗಳನ್ನು ಅರ್ಪಿಸುತ್ತೇವೆ. ಇವರ ಸಹಾಯವೂ ಮತ್ತು ಸಹಾನುಭೂತಿಯೂ ಇಲ್ಲದಿದ್ದ ಪಕ್ಷದಲ್ಲಿ ಈ ಮಂಡಲಿಯು ಇಷ್ಟು ಮುಂದುವರಿಯುತ್ತಿರಲೂ ಇಲ್ಲ ಮತ್ತು ಮುಂದೆ ಅಭಿವೃದ್ಧಿ ಹೊಂದುತ್ತದೆಂಬ ಆಸೆಯೂ ಇರುತ್ತಿರಲಿಲ್ಲ.

(ಸಹಿ) ಮಿಸೆಸ್ ಆರ್. ಅನಂತರಾಮಯ್ಯ,
ಡಿಸ್ಟ್ರಿಕ್ಟು ಕಮಿಷನರ್, ಬೆಂಗಳೂರು ಡಿಸ್ಟ್ರಿಕ್ಟು.

ಮೈಸೂರು ಡಿಸ್ಟ್ರಿಕ್ಟ್ ರಿಪೋರ್ಟು.

ಈ ವರ್ಷ ಕಮಿಟಿಯ ಮೆಂಬರುಗಳಲ್ಲಿ ಕೆಲವು ಬದಲಾವಣೆಗಳು ಆದವು. ಮಿಸ್ ಸ್ಟ್ರೋರ್, ಮಿಸ್ ಬೂಟ್, ಮಿಸ್ ಫ್ರಾಡ್‌ಷಾ, ಮಿಸೆಸ್ ಶ್ರೀನರಸಿಂಹಯ್ಯ ಮತ್ತು ಶ್ರೀಮತಿ ನಾಗಮ್ಮ ಇವರುಗಳಿಂದ ರಾಜೀನಾಮೆಯು ಸ್ವೀಕರಿಸಲ್ಪಟ್ಟಿತು. ಇವರ ಜಾಗಗಳನ್ನು ಮಿಸೆಸ್ ಟಾಮ್ಲಿನ್ಸನ್, ಮಿಸೆಸ್ ಬಸಪ್ಪ, ಮಿಸ್ ಡನ್ನಿಂಗ್, ಮಿಸ್ ಮ್ಯಾರ್ಥರ್ ಮತ್ತು ಮಿಸೆಸ್ A. T. ಲಕ್ಷಮ್ಮ ಇವರುಗಳಿಂದ ಭರ್ತಿಮಾಡಲ್ಪಟ್ಟಿತು.

1933ನೆಯ ಆಗಸ್ಟ್ ತಿಂಗಳಲ್ಲಿ ಮಿಸ್ ಕೋಟಿಲಿಂಗಂರವರು ಇಂಗ್ಲೆಂಡಿಗೆ ಪ್ರಯಾಣ ಬೆಳಸಿದರು. ಇವರ ಸ್ಥಾನವಾದ ಸೆಕ್ರೆಟೆರಿಯವರ ಸ್ಥಾನಕ್ಕೆ ಮಿಸ್ ಡನ್ನಿಂಗ್‌ರವರನ್ನು ನೇಮಕಮಾಡಲಾಯಿತು.

1933ನೆಯ ಡಿಶೆಂಬರಿನಲ್ಲಿ ಡಾಕ್ಟರ್ ಯು. ಅಭಯಾಂಬಾಳ್‌ರವರು ಮರಣಪಟ್ಟಿದುದರಿಂದ ಒಂದು ಸ್ಥಾನವು ಖಾಲಿಯಾಯಿತು.

1934ನೆಯ ಜೂನ್ ತಿಂಗಳಲ್ಲಿ ಡಾಕ್ಟರ್ ಗಿಲ್ಲೆಸ್ಪಿಯವರು ಫರ್ಲೋ ರಜದಲ್ಲಿ ಇಂಗ್ಲೆಂಡಿಗೆ ಹೋದುದರಿಂದ ಇನ್ನೊಂದು ಸ್ಥಾನವು ಖಾಲಿಯಾಯಿತು.

ಕಾರ್ಯಕಲಾಪಗಳು.

ಈ ಅಸೋಸಿಯೇಷನಿನ್ನ ಪರವಾಗಿ ಜುಲೈ 1 ರಿಂದ 8 ರವರಿಗೆ ಒಂದು ಕ್ಯಾಂಪು ಏರ್ಪಡಿಸಲ್ಪಟ್ಟಿತು. ಮೈಸೂರು ಸಂಸ್ಥಾನಕ್ಕೆಲ್ಲ ಆನರೆರಿ ಶಿಕ್ಷಕರಾದ ಮಿಸೆಸ್ ರೋರವರು (Mrs. Rowe) ಶಿಕ್ಷಕರಾಗಲು ಒಪ್ಪಿದರು. ಉಪಾಧ್ಯಾಯಿನಿಯರ ಸೌಕರ್ಯಕ್ಕೋಸ್ಕರವಾಗಿ, ಮಹಾರಾಣಿ ಕಾಲೇಜಿನ ವಿಶಾಲವಾದ ಮೈದಾನದಲ್ಲಿ ಸಾಯಂಕಾಲದ ಹೊತ್ತು ಕ್ಯಾಂಪನ್ನು ನಡೆಸಲು ಏರ್ಪಡಿಸಿತ್ತು. ಈ ಊರಿನ ಮಿಡಲ್ ಮತ್ತು ಪ್ರೈಮರಿ ಸ್ಕೂಲಿನ, ಮಹಾರಾಣಿಯವರ ಹೈ ಸ್ಕೂಲಿನ, ಉರ್ದು ಟ್ರೈನಿಂಗ್ ಸ್ಕೂಲಿನ, ವಿಮೆನ್ಸ್ ಟ್ರೈನಿಂಗ್ ಕಾಲೇಜಿನ, ಶ್ರೀ ವಾಣೀವಿಲಾಸ ಅರ್ಸು ಗರ್ಲ್ಸ್ ಸ್ಕೂಲಿನ, ವೊಕೇಷನಲ್ ಇನ್ಸ್ಟಿಟ್ಯೂಟಿನ, ಮಿಷನ್ ಆಸ್ಪತ್ರೆಯ ಮತ್ತು ಹಾಸನದ ಮಿಷನ್ ಸ್ಕೂಲಿನ ಉಪಾಧ್ಯಾಯಿನಿಯರೂ ಇತರರೂ ಒಟ್ಟು 48 ಮಂದಿ ಶಿಕ್ಷಣ ಪಡೆಯಲು ಬಂದಿದ್ದರು.

ಈ ಕ್ಯಾಂಪಿನ ಕೊನೆಯ ದಿವಸ ಒಂದು ದೊಡ್ಡ ಸಂತೋಷ ಕೂಟವು ನಡೆಸಲ್ಪಟ್ಟಿತು. ಸುಮಾರು 130 ಜನ ಗೈಡುಗಳು ಸಾಯಂ ಕಾಲ ಆಟ ಪಾಟಗಳಿಂದ ಸಂತೋಷ ಪಟ್ಟರು.

ಮಹಾ ಸಂತೋಷ ಕೂಟ.

1933ನೆಯ ನವೆಂಬರ್ 27ನೆಯ ತಾರೀಖಿನ ದಿವಸ ಮೈಸೂರು ಪಟ್ಟಣದ ಗೈಡ್ ಕಂಪೆನಿಗಳೆಲ್ಲರೂ ಸೇರಿ ಚಾಮುಂಡಿ ವಿಹಾರದ ಮೈದಾನ ದಲ್ಲಿ ಒಂದು ಮಹಾ ಸಂತೋಷ ಕೂಟವನ್ನು ನೆರೆಸಿದ್ದರು. ಶ್ರೀಮದ್ಯುವ ರಾಣಿಯವರು ವಂದನೆಗಳನ್ನು ಸ್ವೀಕರಿಸಿದರು. ಸುಮಾರು 150 ಜನ ಗೈಡುಗಳೂ ಮತ್ತು ಗೈಡರುಗಳೂ ಕೂಡ ನೆರೆದಿದ್ದರು. ಈ ಸಂತೋಷ ಕೂಟವು ಬಹಳ ಚೆನ್ನಾಗಿ ನಡೆಯಿತಲ್ಲದೆ ಈ ಊರಿನಲ್ಲಿ ಈ ಮಂಡಲಿಯು ಮುಂದಕ್ಕೆ ಬರಲು ಬಹಳ ಸಹಾಯವಾಯಿತು. ಈ ಸಂದರ್ಭದಲ್ಲಿ ಸುಮಾರು 200 ಜನ ಮಹಿಳೆಯರು ನೆರೆದಿದ್ದರು.

ವರ್ಧಂತಿಯ ಉತ್ಸವಗಳು.

ಫೆಬ್ರವರಿ 22ನೆಯ ತಾರೀಖಿನ ದಿವಸ ಮೈಸೂರು ಪಟ್ಟಣದ ಗರ್ಲ್ ಗೈಡುಗಳು, ಮಹಾರಾಣಿ ಹೈ ಸ್ಕೂಲಿನಲ್ಲಿ ಒಂದು ಸಂತೋಷ ಕೂಟವನ್ನು ಏರ್ಪಡಿಸಿ ಲಾರ್ಡ್ ಮತ್ತು ಲೇಡಿ ಬೇಡೆನ್ ಪೊವೆಲ‘ರವರ ವರ್ಧಂತ್ಯು ತ್ಸವವನ್ನು ನೆರವೇರಿಸಿದರು.

ಈ ಪಟ್ಟಣದ ಗೈಡುಗಳ ಮತ್ತು ಗೈಡರುಗಳ ಭಾವ ಚಿತ್ರವು ತೆಗೆಯಲ್ಪಟ್ಟಿತು. ಡಿಸ್ಟ್ರಿಕ್ಟ್ ಕಮಿಷನರಾದ ಡಾಕ್ಟರ್ ಗಿಲ್ಲೆಸ್ಪಿಯವರು ವಂದನೆಯನ್ನು ಸ್ವೀಕರಿಸಿದರು. ನಂತರ ಕೆಲವು ಸ್ಪರ್ಧೆಗಳು ನಡೆಸ ಲ್ಪಟ್ಟವು. ಸ್ಪರ್ಧೆಯಲ್ಲಿ ಗೆದ್ದ ಕಂಪೆನಿಗೆ ಡಾಕ್ಟರ್ ಗಿಲ್ಲೆಸ್ಪಿಯವರು ಒಂದು ಬೆಳ್ಳಿಯ ಬಟ್ಟಲನ್ನು (Silver cup) ಇನಾಮಾಗಿ ಕೊಟ್ಟರು. ಗುಡ‘ ಷೆಪ್ಪರ್ಡ‘ ಕಾನ್ವೆಂಟಿಗೆ ಸೇರಿದ 5ನೆಯ ಮೈಸೂರು ಕಂಪೆನಿಯು ಈ ಬಹುಮಾನವನ್ನು ಪಡೆಯಿತು.

ಪದಕಗಳು (Badges).

ಪ್ರಸಕ್ತ ವರ್ಷದಲ್ಲಿ ಅನೇಕ ಗೈಡುಗಳು ತಮ್ಮ ಎರಡನೆ ದರ್ಜೆಯ ಬ್ಯಾಡ್ಜುಗಳ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. ಡಾಕ್ಟರ್

ಗಿಲ್ಲೆಸ್ಪಿಯವರು ಚಿಕಿತ್ಸೆಯ ವಿಷಯದಲ್ಲಿ ಕ್ರಮವಾದ ಪಾಠಗಳನ್ನು ಕೊಟ್ಟರು. 1934ನೆಯ ಮಾರ್ಚಿಯಲ್ಲಿ ಒಂದು ಪರೀಕ್ಷೆಯು ನಡೆದು ಆರು ಜನ ಗೈಡರುಗಳು ಪದಕಗಳನ್ನು ಪಡೆದರು.

ಅದೇ ಸಂದರ್ಭದಲ್ಲಿ ಅಡಿಗೆಯ ವಿಷಯದಲ್ಲಿ ಒಂದು ಪರೀಕ್ಷೆಯು ನಡೆದು ದೇಶೀಯ ಮತ್ತು ಪಾಶ್ಚಿಮಾತ್ಯ ಅಡಿಗೆ ಪರೀಕ್ಷೆಯಲ್ಲಿ ಒಂಭತ್ತು ಜನರು ತೇರ್ಗಡೆ ಹೊಂದಿದರು.

ಕಂಪೆನಿಗಳು.

ಈ ಪಟ್ಟಣದಲ್ಲಿ ಸಂತೋಷ ಕೂಟಗಳನ್ನು ಎಲ್ಲ ಕಂಪೆನಿಗಳನ್ನೂ ಸೇರಿಸಿ ನೆರವೇರಿಸಿದ್ದಲ್ಲದೆ, ಪ್ರತಿಯೊಂದು ಕಂಪೆನಿಯೂ ಕೂಡ ತಮ್ಮ ತಮ್ಮ ಕಂಪೆನಿಯ ಕಾರ್ಯಕ್ರಮಗಳನ್ನು ಸರಿಯಾಗಿ ನೆರವೇರಿಸಲು ಉತ್ತೇಜನವು ಕೊಡಲ್ಪಟ್ಟಿತು.

ಕಂಪೆನಿಯ ಮೀಟಿಂಗುಗಳು ಪ್ರತಿ ಕಂಪೆನಿಯಲ್ಲಿಯೂ ವಾರಕೊಮ್ಮೆ ನಡೆಸಲ್ಪಟ್ಟವು. ಕೆಲವು ಸಮಯಗಳಲ್ಲಿ ಒಂದು ಕಂಪೆನಿಯು ಮತ್ತೊಂದು ಕಂಪೆನಿಗೆ ಆಹ್ವಾನವನ್ನು ಕೊಟ್ಟು ಸಾಯಂಕಾಲ ಸಂತೋಷದಿಂದ ಕಾಲಕಳೆಯುತ್ತಿದ್ದುದೂ ಉಂಟು. ಇದರಿಂದ ಅವರಿಗೆ ತಾವು ಒಂದು ಮಹಾಸೋದರೀ ಮಂಡಲಿಗೆ ಸೇರಿದ್ದಾರೆಂಬ ಭಾವನೆಯು ಬರುತ್ತದೆ.

ಕ್ಯಾಂಪುಗಳು ಯಾವುದೂ ಇಲ್ಲದಿದ್ದರೂ ಹೊರಗೆ ಪ್ರವಾಸ ಮಾಡಲು ಕೆಲವು ಕಂಪೆನಿಗಳು ಹೋಗಿವೆ. ಮೈಸೂರಿನ 5ನೆಯ ಕಂಪೆನಿಯು ಎಲವಾಲದ ಬಂಗಲೆಯಲ್ಲಿ ಒಂದು ಮಧ್ಯಾಹ್ನ ಸಂತೋಷದಿಂದ ಕಾಲ ಕಳೆದರು. ಆಗ ಅವರೇ ಚಹಾ (Tea) ವನ್ನು ಮಾಡಿಕೊಂಡಿದ್ದರು. ಹೀಗೆ ಹೊರಗೆ ಹೋಗುವುದು ಗೈಡುಗಳಿಗೆ ತುಂಬಾ ಸಂತೋಷ.

ಡಿಸ್ಟ್ರಿಕ್ಟ್ ಕಮಿಷನರಾದ ಡಾಕ್ಟರ್ ಗಿಲ್ಲೆಸ್ಪಿಯವರು ಎಲ್ಲ ಕಂಪೆನಿಗಳನ್ನು ಪರಿಶೀಲಿಸಿದ್ದಲ್ಲದೆ ಕೆಲವು ಜನ ಉಮೇದುವಾರರನ್ನು ಸೇರಿಸಿಕೊಂಡರು.

1932ನೆಯ ಮಾರ್ಚಿ ತಿಂಗಳಲ್ಲಿ, ಶಿವನಸಮುದ್ರದಲ್ಲಿ ಮೈಸೂರು ಅಸೋಸಿಯೇಷನ್ನಿನ ಶಾಖೆಯಾಗಿ ಒಂದು ಗರ್ಲ್ ಗೈಡ್ ಅಸೋಸಿ

ಯೇಷನ್ ಪ್ರಾರಂಭವಾಯಿತು. ಡಾಕ್ಟರ್ ಗಿಲ್ಲೆಸ್ಪಿಯವರು ಪ್ರೆಸಿಡೆಂಟ ರಾಗಿ ಕೆಲವು ಜನರನ್ನು ಎನ್ರೋಲ್ (Enrol) ಮಾಡಿದರು. ಈ ಅಸೋಸಿಯೇಷನ್ನಿಗೆ ಮಿಸೆಸ್ ವೆಸ್ಟ್ರಾಪ್ (Mrs. Westrap) ರವರು ಪ್ರೆಸಿಡೆಂಟರು. ಒಂದು ಗೈಡ್ ಕಂಪೆನಿಯೂ ಒಂದು ಫ್ಲಾಕೂ ಪ್ರಾರಂಭ ವಾಯಿತು.

(ಸಹಿ) ಮಿಸೆಸ್ L. M. ಸ್ಟೋನ್,

ಡಿಸೆಂಬರ್ 1934. ಡಿಸ್ಟ್ರಿಕ್ಟ್ ಕಮಿಷನರ್, ಮೈಸೂರು ಡಿಸ್ಟ್ರಿಕ್ಟು.

ಕೋಲಾರ ಡಿಸ್ಟ್ರಿಕ್ಟು.

ಈ ಅವಧಿಯಲ್ಲಿ ತರಬೇತಾದ ಗೈಡರುಗಳು ಯಾರೂ ಇಲ್ಲದಿದ್ದುದರಿಂದ ಈ ಡಿಸ್ಟ್ರಿಕ್ಟಿನಲ್ಲಿ ಈ ಸಂಸ್ಥೆಯು ಹೆಚ್ಚು ಮುಂದುವರಿಯಲಿಲ್ಲ. ಆದರೆ ಸದ್ಯದಲ್ಲಿಯೇ ಈಗಿನ ವರದಿಗಿಂತಲೂ ಉತ್ತಮವಾದ ವರದಿಯನ್ನು ಕೊಡಬಹುದೆಂದು ಆಸೆಯಿದೆ.

ನಾವು ಉದಕಮಂಡಲದ (Ootacamund) ಟ್ರೈನಿಂಗ್ ಕ್ಯಾಂಪಿಗೆ ಇಬ್ಬರು ಗೈಡರುಗಳನ್ನು ಕಳುಹಿಸಿದ್ದೆವು. ವಾಪಸ್ಸು ಬಂದನಂತರ ಅವರು ಅಮೆರಿಕನ್ ಮಿಷನ್ ಗರ್ಲ್ಸ್ ಹೈ ಸ್ಕೂಲಿನಲ್ಲಿ ಶಿಕ್ಷಣವನ್ನು ಕೊಡುತ್ತಿದ್ದಾರೆ.

ಗೌರ್ನಮೆಂಟ್ ಗರ್ಲ್ಸ್ ಸ್ಕೂಲಿನಲ್ಲಿ ತರಬೇತಾದ ಮುಖ್ಯೋಪಾಧ್ಯಾಯಿನಿಯರ ನೇತೃತ್ವದಲ್ಲಿ ಒಂದು ಕಂಪೆನಿಯಿದೆ. ಆದರೆ ಆಕೆಯು ಒಬ್ಬರೇ ಆದುದರಿಂದ ಹೆಚ್ಚು ಏನೂ ಮಾಡಲಾಗಲಿಲ್ಲ. ಹೆಚ್ಚಿಗೆ ಕಾರ್ಯಕಲಾಪಗಳಿಗೆ ಅವಕಾಶವಿಲ್ಲದೆ ಇದ್ದರೂ ಕೂಡ ಆ ಕಂಪೆನಿಯು ಮುಂದುವರಿಯುತ್ತಿದೆ.

ಫೆಬ್ರವರಿ 24ನೆಯ ತಾರೀಖಿನ ದಿವಸ ಸ್ಕೂಲಿನ ಆವರಣದಲ್ಲಿ ಗೈಡ್ ವರ್ಧಂತಿಯು ಆಟಪಾಟಗಳಿಂದ ನಡೆಯಿಸಲ್ಪಟ್ಟಿತು. ಗೆದ್ದವರಿಗೆ ಸಣ್ಣ ಪಾರಿತೋಷಕಗಳು ಕೊಡಲ್ಪಟ್ಟವು. ಮಿಸೆಸ್ ರೋರವರು ಮತ್ತು ಮಿಸೆಸ್ ರಾಘವಾಚಾರಿಯವರೂ ನಮ್ಮಲ್ಲಿಗೆ ಬಂದಿದ್ದರು. ಮಿಸೆಸ್ ರೋರವರು ಕಲಿಸಿಕೊಟ್ಟ ಆಟಗಳಿಂದಲೂ, ಹಾಡುಗಳಿಂದಲೂ ಮಕ್ಕಳು ತುಂಬಾ ಸಂತೋಷಪಟ್ಟರು. ಗೈಡಿಂಗ್ ವಿಚಾರವಾಗಿಯೂ ಮತ್ತು ಗೈಡಿಂಗ್ ಪದ್ಧತಿಯಿಂದ ದೊಡ್ಡವರಿಗೆ ಯಾವ ರೀತಿ ಸಹಾಯವು ಮಾಡಬಹುದೆಂಬ ವಿಚಾರವಾಗಿಯೂ ಮಿಸೆಸ್ ರಾಘವಾಚಾರಿಯವರು ಉಪನ್ಯಾಸವನ್ನು ಕೊಟ್ಟರು.

(ಸಹಿ) ಮಿಸ್ M. M. ಬಗ್ಬಿ (Bugby),
31-12-1933. ಡಿಸ್ಟ್ರಿಕ್ಟ್ ಕಮಿಷನರ್, ಕೋಲಾರ ಡಿಸ್ಟ್ರಿಕ್ಟು.

20–11–34ರಲ್ಲಿ ಕಳುಹಿಸಿದ ರಿಪೋರ್ಟು.

ಈ ವರ್ಷದ ಪ್ರಾರಂಭದಲ್ಲಿ ನೇಮಕರಾದ ಡಿಸ್ಟ್ರಿಕ್ಟ್ ಕಮಿಷನರವರು ಈ ಗರ್ಲ್ ಗೈಡ್ ಸಮಿತಿಯನ್ನು ಈ ಡಿಸ್ಟ್ರಿಕ್ಟಿನಲ್ಲಿ ಪುನಃ ರಚನೆ ಮಾಡಲು ಬಹು ಪ್ರಯತ್ನ ಮಾಡುತ್ತಿರುತ್ತಾರೆ. ಆದರೆ ಅದಕ್ಕೆ ಸಹಾನುಭೂತಿಯು ಅಷ್ಟೊಂದು ತೃಪ್ತಿಕರವಾಗಿ ದೊರೆತಿಲ್ಲ.

ಇಲ್ಲಿಯ ಡಿಸ್ಟ್ರಿಕ್ಟ್ ಕಮಿಷನರಾದ M. E. M. ಹೈ ಸ್ಕೂಲಿನ ಮುಖ್ಯೋಪಾಧ್ಯಾನಿಯರೂ ಕೆಲವು ತಿಂಗಳು ಬಹಳ ಪ್ರಯತ್ನಪಟ್ಟು 21 ಜನ ಹುಡುಗಿಯರನ್ನು ಸೇರಿಸಿ ಅವರನ್ನು ತರಬೇತು ಮಾಡುತ್ತಿರುತ್ತಾರೆ. ಈ ಸ್ಕೂಲಿನಲ್ಲಿ ಮೂರು ಜನ ಉಪಾಧ್ಯಾಯಿನಿಯರೂ ಒಬ್ಬ ವಿದ್ಯಾರ್ಥಿನಿಯೂ ಸಹ ನಮ್ಮ ದೇಶದ ಹೊರಗಡೆ ಎನ್ರೋಲ್ (Enrol) ಆಗಿರುತ್ತಾರೆ. ಈ ಉಪಾಧ್ಯಾಯಿನಿಯರ ಪೈಕಿ ಒಬ್ಬಳು ಕ್ಯಾಪ್ಟನ್ ಆಗಿಯೂ ಮತ್ತಿಬ್ಬರು ಸಹಾಯಕರಾಗಿಯೂ (Lieutenants) ನೇಮಕವಾಗಿರುತ್ತಾರೆ.

ಈ ಮಂಡಲಿಯು ಈ ಡಿಸ್ಟ್ರಿಕ್ಟಿನಲ್ಲಿ ಇಷ್ಟು ನಿಧಾನವಾಗಿ ಮುಂದುವರಿಯಲು ಶಾಲೆಯ ವಿದ್ಯಾರ್ಥಿನಿಯರ ಬಡತನವೇ ಕಾರಣ. ಗೈಡುಗಳಿಗೆ ಬೇಕಾದ ಕೆಲವು ಸಲಕರಣೆಗಳನ್ನು ಕೊಂಡುಕೊಳ್ಳುವುದೂ ಕೂಡ ಅವರಿಗೆ ಭಾರವಾಗುತ್ತದೆ. ಹೊರಗಡೆಯ ಸಹಾಯದಿಂದ ಈ ಸ್ಕೂಲಿನ ಕಂಪೆನಿಯ ಆರ್ಥಿಕ ಕುಂದು ಕೊರತೆಯು ಹೋಗಲಾಡಿಸಲ್ಪಡುವುದೆಂದು ನಂಬಿದೆ.

ಗೈಡುಗಳಿಗೆ ಗೈಡು ಭಾಷೆಗಳು, ಗೈಡ್ ನಿಯಮಗಳು, ಗಂಟು ಹಾಕುವುದು ಮತ್ತು ಕೆಲವು ಹಾಡುಗಳು ಇವುಗಳನ್ನು ಹೇಳಿಕೊಟ್ಟುದೇ ಅಲ್ಲದೆ ಅವರೆಲ್ಲರಿಗೂ ಪ್ರಥಮ ಚಿಕಿತ್ಸೆಯ ವಿಷಯವಾಗಿ ಪಾಠಗಳನ್ನು ಹೇಳಿಕೊಡುತ್ತಿದೆ. ಅವರಲ್ಲಿ ಅನೇಕರು ಎನ್ರೋಲ್ (Enrol) ಆಗಲು ಸಿದ್ಧವಾಗಿದ್ದಾರೆ.

ಗೌರ್ನಮೆಂಟ್ ಗರ್ಲ್ಸ್ ಮಿಡ್ಲ್ ಸ್ಕೂಲಿನ ಮುಖ್ಯೋಪಾಧ್ಯಾಯಿನಿಯರು ಹೋದ ವರ್ಷ ಗೈಡ್ ಕ್ಯಾಂಪೊಂದನ್ನು ಏರ್ಪಡಿಸಲು ಸಾಧ್ಯವಾಗದೆ ಇದ್ದುದಕ್ಕೋಸ್ಕರ ಬಹಳ ನೊಂದುಕೊಂಡಿರುತ್ತಾರೆ. ಆದರೆ ಈಚೆಗೆ 12 ಜನ ಹುಡುಗಿಯರು ಶಿಕ್ಷಣವನ್ನು ಪಡೆಯುತ್ತಿರುತ್ತಾರೆ. ಅವರೇ

1932ರಲ್ಲಿ ಉದಕಮಂಡಲದಲ್ಲಿ ಬೇಸಿಗೆಯಲ್ಲಿ ನಡೆಸಿದ ಶಿಕ್ಷಣದ ಕ್ಯಾಂಪಿಗೆ ಹೋಗಿದ್ದರು. ಈಗ ಈ 12 ಜನ ಹುಡುಗಿಯರೇ ಮುಂದೆ ಒಂದು ದೊಡ್ಡ ಕಂಪೆನಿಯನ್ನು ಮಾಡಿಕೊಳ್ಳುತ್ತಾರೆಂದು ನಂಬಿದೆ.

ಅನೇಕ ಕಷ್ಟಗಳಿದ್ದರೂ ಕೂಡ, ಸದ್ಯದಲ್ಲಿಯೇ ಈ ಡಿಸ್ಟ್ರಿಕ್ಟಿನಲ್ಲಿ ಗೈಡ್ ಕಾರ್ಯಕ್ರಮಗಳು ಬಹಳ ಮುಂದಕ್ಕೆ ಬರುತ್ತದೆಂದು ನಂಬಲಾಗಿದೆ.

ಸದ್ಯದಲ್ಲಿ ಎರಡು ಕಂಪೆನಿಗಳು, ಅಂದರೆ ಮಿಷನ್ ಸ್ಕೂಲಿನಲ್ಲೊಂದು ಗೌರ್ನಮೆಂಟ್ ಮಿಡಲ್ ಸ್ಕೂಲಿನಲ್ಲೊಂದು, ಇವೆ. ಒಂದರಲ್ಲಿ 21 ಜನಗಳೂ ಮತ್ತೊಂದರಲ್ಲಿ 12 ಜನಗಳೂ ಇದ್ದಾರೆ.

ಪ್ರಸಕ್ತಕಾಲದಲ್ಲಿ 12 ಮೀಟಿಂಗುಗಳೂ ಒಂದು ರ್‍ಯಾಲಿಯೂ ನಡೆದುವು.

(ಸಹಿ) ಮಿಸ್ ಟೇಕಲ ಹಾಫ್‌ಮನ್,

20–11–1934. ಡಿಸ್ಟ್ರಿಕ್ಟ್ ಕಮಿಷನರ್, ಕೋಲಾರ ಡಿಸ್ಟ್ರಿಕ್ಟು.

ಕೋಲಾರ ಗೋಲ್ಡ್ ಫೀಲ್ಡ್ಸ್

1933ನೆಯ ಆಗಸ್ಟ್ ತಿಂಗಳಲ್ಲಿ ಕೋಲಾರ್ ಗೋಲ್ಡ್ ಫೀಲ್ಡ್ಸ್ನಲ್ಲಿ ಗೈಡುಗಳಿಗೆ ಪಾಠಗಳು ಪ್ರಾರಂಭವಾದುವು. 1934ನೆಯ ಮಾರ್ಚಿ ತಿಂಗಳಲ್ಲಿ ರೇಂಜರ್ ಮತ್ತು ಗೈಡುಗಳ ಏಳು ಕಂಪೆನಿಗಳು ಎನ್ರೋಲ್ (Enrol) ಆದುವು. ಕಂಪೆನಿಗಳು ಡಿಸ್ಟ್ರಿಕ್ಟಿನ ಎಲ್ಲ ಉತ್ಸವಗಳಲ್ಲಿಯೂ ಹಾಜರಿದ್ದವು. ಗೈಡ್ ವರ್ಧಂತಿಯ ದಿವಸ ಒಂದು ಡಿಸ್ಟ್ರಿಕ್ಟ್ ರ್‍ಯಾಲಿಯು ಏರ್ಪಡಿಸಲ್ಪಟ್ಟಿತ್ತು. ಆಗ ಬಹಳ ಜನಗಳು ಬಂದಿದ್ದರು.

ತಿಂಗಳಿಗೊಂದಾವೃತ್ತಿ ಗೈಡುಗಳು ಹೊರಗೆ ಕರೆದುಕೊಂಡು ಹೋಗಲ್ಪಟ್ಟಿದ್ದರು. ಹೊರಗೆ ಹೋದಾಗ ಪ್ರಕೃತಿ ಪಾಠ, ಪದಾನ್ವೇಷಣೆ ಮುಂತಾದ ಕಾರ್ಯಕ್ರಮಗಳಲ್ಲಿ ಗೈಡುಗಳು ದಿನವೆಲ್ಲವೂ ಕಾಲಕಳೆಯುತ್ತಿದ್ದರು.

ಉದಕಮಂಡಲದ (Ootacamund) ಟ್ರೈನಿಂಗ್ ಕ್ಯಾಂಪಿಗೆ ಮೂರು ಜನ ಗೈಡರುಗಳು ಶಿಕ್ಷಣವನ್ನು ಪಡೆಯಲು ಕಳುಹಿಸಲ್ಪಟ್ಟಿದ್ದರು. ನಮ್ಮ ರೇಂಜರುಗಳೆಲ್ಲರೂ ಕಂಪೆನಿಯ ಯಜಮಾನ್ಯವನ್ನು ವಹಿಸಲು ಶಿಕ್ಷಣ ಪಡೆದು ಕ್ಯಾಪ್ಟನ್ಗಳಾಗಿಯೂ ಸಹಾಯಕರಾಗಿಯೂ (Lieutenants) ಇರುತ್ತಾರೆ. ಮಿಸ್ ಪಾಲ್‌ರವರ ಸಹಾಯವು ಕೆಲವು ದಿವಸಗಳವರಿಗೂ ನಮಗೆ ದೊರೆತಿತ್ತು. ಅವರು ದೇಶೀಯ ಕಂಪೆನಿಗಳೆದುರಿಗೆ ಆರೋಗ್ಯ ಮತ್ತು ರೋಗಿಗಳ ದಾದಿಯರ ವಿಚಾರವಾಗಿ ಪ್ರದರ್ಶನವನ್ನು ಕೊಟ್ಟಿದುದರಿಂದ ಅವರೆಲ್ಲರಿಗೂ ಬಹಳ ಪ್ರಯೋಜನವಾಯಿತು.

ನಮ್ಮ ಗೈಡುಗಳು ಒಂದು ಸಂಗೀತ ಕಚೇರಿಯನ್ನು (Concert) ಬಹಳ ಶ್ಲಾಘನೀಯವಾಗಿ ನಡೆಸಿದರು. ಅಕ್ಟೋಬರ್ ತಿಂಗಳಿನಲ್ಲಿ ಹೊರಗಡೆ ಒಂದು ಸಂತೋಷ ಕೂಟವು ಏರ್ಪಡಿಸಲ್ಪಟ್ಟಿತ್ತು. ಬೆಳಗ್ಗೆ ಬಸ್ಸಿನಲ್ಲಿ ಹೊರಟು 10ನೆಯ ಮೈಲಿಯ ಹತ್ತಿರ ತಂಗಿದೆವು. ಅಲ್ಲಿ ಗೈಡುಗಳೆಲ್ಲರಿಗೂ ಬೇರೆ ಬೇರೆ ಕೆಲಸಗಳನ್ನು ಹಂಚಿ ಕೆಲಸಮಾಡಲು ಬಿಟ್ಟೆವು. ಕೆಲವರು ಆಹಾರವನ್ನು ಸಿದ್ಧಪಡಿಸಲು ಹೊರಟರು : ಮತ್ತೆ ಕೆಲವರು ಇತರ ಕೆಲಸಗಳನ್ನು ಮಾಡಲು ಹೊರಟರು ; ಮತ್ತೆ ಕೆಲವರು ಗಾಳಿ ಸವಾರಿ ಹೊರಟರು. ಪ್ರತಿಯೊಬ್ಬರೂ ಈ ಸಂದರ್ಭದಲ್ಲಿ ಬಹಳವಾಗಿ ಆನಂದಪಟ್ಟರು. ಅಲ್ಲಿ ದೇಶೀಯ ಹುಡುಗಿಯರೂ ಆಂಗ್ಲೇಯ ಹುಡುಗಿಯರೂ

ಸೇರಿ ಸಂತೋಷವಾಗಿದ್ದುಕೊಂಡು ನಿಜವಾದ ಸಹೋದರೀ ಭಾವವನ್ನು ಪ್ರದರ್ಶಿಸಿದರು.

ಪ್ರಸಕ್ತವರ್ಷದಲ್ಲಿ ದಾದಿ, ಸ್ಕಿಪ್ಪಿಂಗ್, ನೃತ್ಯ, ಈಜುವುದು ಮತ್ತು ಪ್ರಾಣ ಕಾಪಾಡುವುದು ಇವುಗಳ ಪ್ರವೀಣಪದಕ (Proficiency Badges) ಗಳನೇಕವನ್ನು ಗೈಡುಗಳು ಪಡೆದರು.

ಈ ವರ್ಷದ ಆದಿಯಲ್ಲಿ ಒಂದು ಲೋಕಲ್ ಅಸೋಸಿಯೇಷನ್ ಸ್ಥಾಪಿತವಾಗಿ, ಅನೇಕ ಮಹಿಳೆಯರು ಅಲ್ಲಿಗೆ ಮೆಂಬರಾದರು.

ಮುಂದಿನ ವರ್ಷದಲ್ಲಿ ಇನ್ನೂ ಹೆಚ್ಚು ಅಭಿವೃದ್ಧಿಯನ್ನು ತೋರಿಸುವೆವು. ಎಂಬ ಭರವಸೆ ತುಂಬಾ ಇದೆ.

(ಸಹಿ) ಮಿಸೆಸ್ T. A. V. ರೋ,

ಡಿಸೆಂಬರ್ 1934. ಡಿಸ್ಟ್ರಿಕ್ಟ್ ಕಮಿಷನರ್, ಕೋಲಾರ ಗೋಲ್ಡ್ ಫೀಲ್ಡ್ಸ್.

ತುಮಕೂರು ಡಿಸ್ಟ್ರಿಕ್ಟ್.

ಈ ವರ್ಷ ತುಮಕೂರು ಡಿಸ್ಟ್ರಿಕ್ಟಿನಲ್ಲಿ ಉರ್ದು ಗರ್ಲ್ ಸ್ಕೂಲಿನಲ್ಲಿ ಒಂದು ಹೊಸ ಗರ್ಲ್ ಗೈಡ್ ಕಂಪೆನಿಯೂ, ಎಂಪ್ರೆಸ್ ಮಿಡಲ್ ಸ್ಕೂಲಿನಲ್ಲಿ ಒಂದು ಬ್ಲೂಬರ್ಡ್ ಫ್ಲಾಕೂ ಏರ್ಪಡಿಸಲ್ಪಟ್ಟಿವೆ. ಹೈ ಸ್ಕೂಲಿನ ಹಳೇ ಗೈಡ್ ಕಂಪೆನಿಯಲ್ಲಿ ಒಬ್ಬಳು ಹೊಸ ಗೈಡರ್ ಇರುವಳು. ಇವರೂ ಉರ್ದು ಸ್ಕೂಲಿನ ಗೈಡರೂ ಟ್ರೈನಿಂಗಿಗೋಸ್ಕರವಾಗಿ ಊಟಿಗೆ ಹೋಗಿರುತ್ತಾರೆ.

ಆಗಸ್ಟು 1ನೆಯ ತಾರೀಖಿನ ದಿವಸ 25 ಜನ ಮೆಂಬರುಗಳುಳ್ಳ ಒಂದು ಸ್ಥಳೀಯ ಸಂಸ್ಥೆಯೊಂದನ್ನು ಏರ್ಪಡಿಸಲಾಯಿತು. ಅಲ್ಲದೆ ಮಿಸೆಸ್ ರಾಘವಾಚಾರಿಯವರನ್ನೂ, ಮಿಸ್ ಮಿರ್ಜಾ ಇಸ್ಮಾಯಿಲ್‌ರವರನ್ನೂ ಆಹ್ವಾನಿಸುವ ಒಂದು ಅಪೂರ್ವ ಸುಯೋಗವೂ ಉಂಟಾಯಿತು. ಸ್ಥಳೀಯ ಸಂಸ್ಥೆಗೂ, ಮತ್ತು ಗೈಡು ಚಳುವಳಿಗೂ, ಮಹಿಳೆಯರ ಸಹಾನುಭೂತಿಯನ್ನೂ ಸೌಹಾರ್ದ್ರವನ್ನೂ ಸಂಪಾದಿಸಲೋಸುಗ, ತುಮಕೂರಿನಲ್ಲಿಯೂ, ತಿಪ್ಟೂರಿನಲ್ಲಿಯೂ ಮತ್ತು ಮಧುಗಿರಿಯಲ್ಲಿಯೂ, ಸಭೆಗಳನ್ನು ಸೇರಿಸಲಾಯಿತು. ಅಕ್ಟೋಬರ್ ತಿಂಗಳಿನಲ್ಲಿ ತುಮಕೂರಿನಲ್ಲಿ ನಡೆದ ಟ್ರೈನಿಂಗ್ ಕ್ಯಾಂಪಿಗೆ ಈ ಮೂರು ಊರುಗಳಿಂದಲೂ, ಉಪಾಧ್ಯಾಯಿನಿಯರುಗಳು ಬಂದಿದ್ದರು. ಹೆಡ್‌ಕ್ವಾರ್ಟರ್ಸಿನಿಂದ, ತರಪೇತು ಮಾಡುವುದಕ್ಕೋಸ್ಕರವಾಗಿ, ಮಿಸ್ ಪಾಲ್ ಎಂಬುವರು ಕಳುಹಿಸಲ್ಪಟ್ಟಿದ್ದರು. ಆರು ದಿವಸಗಳ ವರೆಗೂ ಟ್ರೈನಿಂಗ್ ಕ್ಯಾಂಪಿನ ಕಾರ್ಯಕಲಾಪಗಳು ಬಹಳ ಸಾಂಗವಾಗಿ ನೆರವೇರಿಸಲ್ಪಟ್ಟುವು. ಕ್ಯಾಂಪಿನ ಕೊನೆಯಲ್ಲಿ ಹನ್ನೆರಡು ಜನ ಉಪಾಧ್ಯಾಯಿನಿಯರು ಲಿಸ್ಟಿಗೆ ಸೇರಿಸಿಕೊಳ್ಳಲ್ಪಟ್ಟರು. ಇವರುಗಳೆಲ್ಲಾ ಸ್ಥಾಪಿಸುವ ತಮ್ಮ ಸ್ಕೂಲಿಗೆ ಹೋಗಿ ಅಲ್ಲಿ ಹೊಸದಾಗಿ ಕಂಪೆನಿಗಳನ್ನೂ ಫ್ಲಾಕುಗಳನ್ನೂ ಸ್ಥಾಪಿಸುವರೆಂದು ನಿರೀಕ್ಷಿಸಿದೆ.

(ಸಹಿ) ಮಿಸೆಸ್ ಎಂ. ಹಿಲ್,
ಡಿಸ್ಟ್ರಿಕ್ಟ್ ಕಮಿಷನರ್, ತುಮಕೂರು ಡಿಸ್ಟ್ರಿಕ್ಟು.

ತುಮಕೂರು.

ನಮ್ಮ ಗರ್ಲ್ ಗೈಡ್ ಸಂಸ್ಥೆಯ ಪ್ರಥಮ ಕಾರ್ಯಕಲಾಪವು ಗರ್ಲ್ ಗೈಡ್ ಡೆ ಯನ್ನು ನೆಗವೇರಿಸಿದ್ದು. ಅಂದರೆ ಫೆಬ್ರವರಿ ತಿಂಗಳು 22ನೆಯ ತಾರೀಖಿನ ದಿವಸ ತುಮಕೂರಿನ ಮೂರು ಗೈಡು ಕಂಪೆನಿಯವರೂ, ಒಂದು ಬ್ಲೂ ಬರ್ಡ್ಸ್ ಫ್ಲಾಕಿನವರೂ, ತಿಪ್ಟೂರಿನಿಂದ ಬಂದ ಇಬ್ಬರು ಗೈಡರುಗಳೂ ಸಹ, ಡೆಪ್ಯುಟಿ ಕಮಿಷನರವರು ದಯಮಾಡಿ ಬಿಟ್ಟುಕೊಟ್ಟ "ಡಾಬ್ಸ್" (Dobbs) ಬಂಗಲೆಯಲ್ಲಿ ಏರ್ಪಡಿಸಿದ್ದ, ಸಂತೋಷಕೂಟವೊಂದರಲ್ಲಿ ದಿವಸವೆಲ್ಲಾ ಭಾಗಿಗಳಾಗಿದ್ದರು. ಅಂದಿನ ಸಾಯಂಕಾಲ ರ್‍ಯಾಲಿಕ್ಯಾಂಪ್ ಫೈರ್ ಕೂಡ ಏರ್ಪಡಿಸಿತ್ತು. ಈ ಸಂದರ್ಭದಲ್ಲಿ ಸ್ಥಳೀಯ ಸಂಸ್ಥೆಯ ಮೆಂಬರುಗಳೆಲ್ಲಾ ಆಹ್ವಾನಿಸಲ್ಪಟ್ಟಿದ್ದರು. ಕಾರ್ಯ ವಿಶೇಷದಿಂದ ತುಮಕೂರು ಗೈಡ್ ಕಮಿಷನರವರು ಬರಲಾಗದ ಕಾರಣ, ಮಿಸ್ ಪುರಿಯವರೇ ರ್‍ಯಾಲಿ ಕಾರ್ಯವನ್ನು ನೆರವೇರಿಸಿದ್ದಲ್ಲದೆ, ಮಿಡಲ್ ಸ್ಕೂಲು ಕಂಪೆನಿಯನ್ನೂ, ಬ್ಲೂ ಬರ್ಡ್ಸ್ ಫ್ಲಾಕನ್ನೂ ದಯಮಾಡಿ ಎನ್‌ರೋಲು ಮಾಡಿದರು.

ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ, ಮಿಸೆಸ್ ಅಬ್ದುಲ್ ಖಾದರ್ ರವರು ಸ್ಥಳೀಯ ಮೆಂಬರುಗಳನ್ನೂ, ಗೈಡುಗಳನ್ನೂ ಸಂದರ್ಶಿಸಲು ಅವಕಾಶವನ್ನೂ ಕಲ್ಪಿಸುವುದಕ್ಕಾಗಿ, ಒಂದು ಚಿಕ್ಕ ರ್‍ಯಾಲಿಯು, ಜುಲೈ 4ನೆಯ ತಾರೀಖಿನ ದಿವಸ ಏರ್ಪಡಿಸಲಾಯಿತು. ಆ ಸಂದರ್ಭದಲ್ಲಿ ಅಧ್ಯಕ್ಷರು ತಾವು ಯಾವ ಸಮಯದಲ್ಲಿಯೂ ಊರಿನಲ್ಲಿಲ್ಲದಿದ್ದಾಗ್ಯೂ, ಈ ಸಂಸ್ಥೆಯ ವಿಷಯದಲ್ಲಿ ತಮಗೆ ವಿಶೇಷ ಆದರವಿರುವುದಾಗಿಯೂ, ಈ ಸಂಘದ ಅಭಿವೃದ್ಧಿಯೇ ತಮ್ಮ ಮುಖ್ಯ ಹಾರೈಕೆಯೆಂದೂ ಹೇಳಿದರು. ಆಗಸ್ಟು 14ನೆಯ ತಾರೀಖಿನಿಂದ 24ನೆಯ ತಾರೀಖಿನವರೆಗೂ ಟ್ರೈನಿಂಗ್ ಕ್ಯಾಂಪನ್ನು ನಡೆಸುವ ಬಗ್ಗೆ, ಈ ಡಿಸ್ಟ್ರಿಕ್ಟಿಗೆ ಮಿಸ್ ಪಾಲ್ ರವರನ್ನು ಕಳುಹಿಸಿಕೊಡಲಾಗಿತ್ತು. ಕಂಪೆನಿಗಳನ್ನು ಪರೀಕ್ಷಿಸಿ, ಗೈಡುಗಳನ್ನು ಕೇವಲ ದಕ್ಷರನ್ನಾಗಿ ಮಾಡುವುದೇ ಅವರ ಆಗಮನದ ಮುಖ್ಯ ಉದ್ದೇಶವಾಗಿತ್ತು.

ಸ್ಥಳೀಯ ಸಂಸ್ಥೆಯಲ್ಲಿ ಹಾಲಿ 23 ಜನ ಮೆಂಬರುಗಳಿರುವರು. ಎಕ್ಸಿಕ್ಯೂಟಿವ್ ಮತ್ತು ಫೈನಾನ್ಶಿಯಲ್ ಕಮಿಟಿಗಳಲ್ಲಿ ಏಳೇಳು ಜನ

ಮೆಂಬರುಗಳಿರುತ್ತಾರೆ. ಪ್ರತಿಯೊಂದು ಕೆಲಸ ಕಾರ್ಯಗಳೂ ಈ ಕಮಿಟಿಯ ಮುಂದೆಯೇ ತರಲ್ಪಡುವುವು.

ಮೂರು ಗೈಡ್ ಕಂಪೆನಿಗಳು ಆಗಲೇ ರಿಜಿಸ್ಟ್ರಾಗಿ ಇವೆ. ಇಬ್ಬರು ಗೈಡರುಗಳು ತಮ್ಮ ವಾರಂಟುಗಳನ್ನು ಆಗಲೇ ಪಡೆದಿರುತ್ತಾರೆ. ಒಟ್ಟು 70 ಜನ ಗೈಡುಗಳೂ, ಬ್ಲೂ ಬರ್ಡ್‌ಗಳೂ ಲಿಸ್ಟಿಗೆ ಸೇರಿಸಿಕೊಳ್ಳಲ್ಪಟ್ಟಿರುತ್ತಾರೆ.

(ಸಹಿ) ಮಿಸೆಸ್ ಎಂ. ಹಿಲ್,
ಡಿಸ್ಟ್ರಿಕ್ಟ್ ಕಮಿಷನರ್.

ಚಿಕ್ಕಮಗಳೂರು.

ಸೆಪ್ಟೆಂಬರ್ ತಿಂಗಳಿನಲ್ಲಿ ಆನರೆರಿ ಸೆಕ್ರಟೆರಿಯವರು ಮಿಸ್ ಬಿ. ಪಾಲ್‌ರವರೊಡನೆ ಇಲ್ಲಿಗೆ ಬಂದಿದ್ದರು. ಸೆಕ್ರಟೆರಿಯವರು, ಟೌನ್ ಹಾಲಿನಲ್ಲಿ ಅನೇಕ ಮಹಿಳೆಯರು ಸೇರಿದ್ದಾಗ್ಯೆ, ಗೈಡಿಂಗಿನ ಉದ್ದೇಶಗಳನ್ನು ತಿಳಿಸಿದರು.

ಆನರೆರಿ ಸೆಕ್ರಟೆರಿಯವರಾದ ಮಿಸೆಸ್ ರಾಘವಾಚಾರಿಯವರ ಅಧ್ಯಕ್ಷತೆಯಲ್ಲಿ ಒಂದು ಲೋಕಲ್ ಅಸೋಸಿಯೇಷನ್ನು ಸ್ಥಾಪಿತವಾಯಿತು. ಈ ಕೆಳಗಿನವರು ಗೈಡ್ ಮಂಡಲಿಗೆ ಉತ್ತೇಜನ ಕೊಡಲು ನೇಮಕವಾದರು.

ಡಾಕ್ಟರ್ (ಮಿಸ್) ಸ್ಪೈಟ್, ಡಿಸ್ಟ್ರಿಕ್ಟ್ ಕಮಿಷನರ್.

ಮಿಸೆಸ್ ವೆಂಕಟೇಶ ಅಯ್ಯಂಗಾರ್, ಲೋಕಲ್ ಅಸೋಸಿಯೇಷನ್ನಿನ ಪ್ರೆಸಿಡೆಂಟರು.

ಮಿಸ್ F. H. ಸೊರಾಬ್, ಆನರೆರಿ ಸೆಕ್ರಟೆರಿ.

ಹೋದ ನವೆಂಬರಿನಲ್ಲಿ ಬೆಂಗಳೂರಿನಲ್ಲಿ ನಡೆದ ಟ್ರೈನಿಂಗ್ ಕ್ಯಾಂಪಿಗೆ ಮಿಸ್ ಸೊರಾಬ್ ಮತ್ತು ಮಿಸ್ ಲೋಬೋ ಅವರನ್ನು ಕಳುಹಿಸಲಾಗಿತ್ತು.

ಸರಿಯಾಗಿ ತರಬೇತಾದ ಗೈಡರುಗಳು ಇಲ್ಲದೇ ಇದ್ದುದರಿಂದ ಗೈಡುಗಳಿಗೆ ಸರಿಯಾದ ಪಾಠ ಹೇಳಿಕೊಡಲು ಆಗಲಿಲ್ಲ. ಬೆಂಗಳೂರಿಗೆ ಹೋಗಿರುವ ಇಬ್ಬರು ಗೈಡುಗಳು ವಾಪಸ್ಸು ಬಂದನಂತರ ಗೈಡ್ ಮತ್ತು ಬ್ಲೂ ಬರ್ಡ್‌ಗಳಿಗೆ ಸರಿಯಾಗಿ ಪಾಠಗಳನ್ನು ಹೇಳಿಕೊಡಲಾಗುತ್ತದೆ. ಸದ್ಯದಲ್ಲಿಯೇ ನಾವು ಇದಕ್ಕಿಂತಲೂ ಉತ್ತಮವಾದ ವರದಿಯನ್ನು ಕೊಡಲು ನಮಗೆ ಸಾಧ್ಯವಾಗುತ್ತದೆಂತಲೂ, ನಮ್ಮ ಡಿಸ್ಟ್ರಿಕ್ಟಿನಲ್ಲಿ ಈ ಸಮಿತಿಯು ಇನ್ನೂ ಮುಂದುವರಿಯತ್ತದೆಂತಲೂ ನಂಬಿದೆ.

(ಸಹಿ) F. H. ಸೊರಾಬ್,

24-12-1934. ಆನರೆರಿ ಸೆಕ್ರಟೆರಿ.

ಹಾಸನ ಡಿಸ್ಟ್ರಿಕ್ಟು.

ಈ ಡಿಸ್ಟ್ರಿಕ್ಟಿನಲ್ಲಿ ಗರ್ಲ್ ಗೈಡ್ ಚಳವಳಿಯು ನಿಧಾನವಾಗಿ ಅಭಿವೃದ್ಧಿ ಹೊಂದುತ್ತಿದೆ.

ಕಳೆದ ವರ್ಷ ಬಹಳ ಮಟ್ಟಿಗೆ ಮುಂದುವರಿದಂತೆ ನನಗೆ ತೋರುತ್ತೆ.

ನಾವೀಗ ಸ್ಥಳೀಯ ಸಂಸ್ಥೆಯೊಂದನ್ನು ಏರ್ಪಡಿಸುವ ಕಾರ್ಯದಲ್ಲಿ ನಿರತರಾಗಿದ್ದೇವೆ. ಯಾರು ಈ ಚಳವಳಿಯ ವಿಷಯದಲ್ಲಿ, ತಮ್ಮ ಸಹಾಯವನ್ನು ನೀಡಲು ಹಿಂದೇಟು ಹಾಕುತ್ತಿದ್ದರೋ, ಅಂತಹವರನ್ನೇ ಹೆಚ್ಚು ಉತ್ಸಾಹಶೀಲರನ್ನಾಗಿ ಮಾಡಬಲ್ಲೆವೆಂದು, ಈ ಸ್ಥಳೀಯ ಸಂಸ್ಥೆಯೊಂದನ್ನು ಸ್ಥಾಪಿಸಿದನಂತರ, ಹೇಳಬಲ್ಲೆವು.

ಈಗ ನಮ್ಮಲ್ಲಿ ಎರಡು ಗರ್ಲ್ ಗೈಡ್ ಕಂಪೆನಿಗಳೂ, ಒಂದು ಬ್ಲ್ಯೂ ಬರ್ಡ್ ಫ್ಲಾಕೂ ಇರುತ್ತವೆ. ಅಲ್ಲದೆ ಇವುಗಳ ಮೆಂಬರುಗಳೆಲ್ಲರೂ ಬಹಳ ಉತ್ಸಾಹಭರಿತರಾಗಿ ಇರುತ್ತಾರೆ. ಹೊಳೇನರಸೀಪುರದಲ್ಲಿಯೂ ಒಂದು ಗೈಡು ಕಂಪೆನಿಯನ್ನು ಏರ್ಪಡಿಸಬೇಕೆಂದು ಇದ್ದೆವು. ಆದರೆ ಅನೇಕ ಕಾರಣಗಳಿಂದ ಈ ಕಾರ್ಯವು ಇನ್ನೂ ಸಾಧ್ಯವಾಗಿಲ್ಲ.

(ಸಹಿ) ಡಾಕ್ಟರ್ ಇ. ಎಂ. ನ್ಯೂಹಾಮ್,

18–10–33. ಡಿಸ್ಟ್ರಿಕ್ಟ್ ಕಮಿಷನರ್, ಹಾಸನ ಡಿಸ್ಟ್ರಿಕ್ಟು.

ಹಾಸನೆ.

ಹಾಸನದ ಡಿಸ್ಟ್ರಿಕ್ಟಿನಲ್ಲಿ ಗರ್ಲ್ ಗೈಡುಗಳಿಗೆ ಮುಂದುವರಿಯಲು ಈ ವರ್ಷ ಬಹಳ ಅಡಚನೆಗಳು ಬಂದೊದಗಿದವು. ತರಪೇತು ಮಾಡಬಲ್ಲ ಕೆಲಸಗಾರರು ಇಲ್ಲದಿರುವುದೇ ಒಂದು ಮುಖ್ಯ ತೊಂದರೆಯಾಗಿದೆ. ಹೀಗಿದ್ದಾಗ್ಯೂ ಕೂಡ ಗೈಡುಗಳು ಬಹಳ ಉತ್ಸಾಹಶಾಲಿಗಳಾಗಿಯೂ, ಕುಶಲಿಗಳಾಗಿಯೂ ಇರುವರು.

ಸದ್ಯಕ್ಕೆ ಮೂರು ಗರ್ಲ್ ಗೈಡು ಕಂಪೆನಿಗಳೂ, ಒಂದು ಬ್ಲ್ಯೂ ಬರ್ಡ್ ಫ್ಲಾಕೂ ಇರುತ್ತವೆ.

ಫಸ್ಟ್ ಹಾಸನ ಗರ್ಲ್ ಗೈಡ್:—	ಮೆಥೋಡಿಸ್ಟ್ ಮಿಷನ್ ಸ್ಕೂಲು ಅಂಡ್ ಆರ್ಫನೇಜ್, ಹಾಸನ.
ಸೆಕೆಂಡ್ ಡಿಟೋ —	ವಾಣೀವಿಲಾಸ ಗರ್ಲ್ಸ್ ಸ್ಕೂಲ್, ಹಾಸನ.
ಫಸ್ಟ್ ಹೊಳೇನರಸೀಪುರದ ಗರ್ಲ್ ಗೈಡ್.	ಗವರ್ನಮೆಂಟ್ ಗರ್ಲ್ಸ್ ಮಿಡ್ಲ್ ಸ್ಕೂಲ್, ಹೊಳೇನರಸೀಪುರ.
ಫಸ್ಟ್ ಹಾಸನ ಬ್ಲ್ಯೂ ಬರ್ಡ್ :—	ಫಸ್ಟ್ ಹಾಸನ ಗರ್ಲ್ ಗೈಡ್ ಕಂಪೆನಿಗೆ ಸೇರಿದೆ.

ಗೈಡುಗಳು ದೊರೆತ ಒಡನೆಯೇ ಒಂದು ಕಂಪೆನಿಯನ್ನು ಹಾಸನದ ಉರ್ದು ಗರ್ಲ್ಸ್ ಸ್ಕೂಲಿನಲ್ಲಿ ಸ್ಥಾಪಿಸಬೇಕೆಂದಿದೆ. ಆದರೆ ಈ ಕೆಲಸವನ್ನು ಚಿಕ್ಕಮಗಳೂರಿನಲ್ಲಿ ಮೊದಲು ಪ್ರಾರಂಭಿಸಬಹುದು.

ಪ್ರತಿ ಒಂದು ಕಂಪೆನಿಯೂ ಪ್ರತಿ ವಾರದಲ್ಲಿಯೂ—ಅಂದರೆ ರಜಾ ದಿನಗಳು ವಿನಹಾ—ಕ್ರಮವಾಗಿ ಸಭೆ ಸೇರುತ್ತಿತ್ತು. ಹಾಸನದ ಮೊದಲನೆ ಕಂಪೆನಿಯಲ್ಲಿ ಬಹುಮಂದಿ ಗೈಡುಗಳು, ಎರಡನೇ ದರ್ಜೆಯ ಬ್ಯಾಡ್ಜ ಟೆಸ್ಟುಗಳಲ್ಲಿ ತೇರ್ಗಡೆ ಹೊಂದಿರುತ್ತಾರೆ. ಇತರೇಯವರೆಲ್ಲಾ ಟೆಂಡರ್ ಫುಟ್‌ಗಳಾಗಿಯೋ ಅಥವಾ ರಿಕ್ರೂಟ್‌ಗಳಾಗಿಯೋ ಇರುತ್ತಾರೆ. ಆದರೆ ಪ್ರೊಫಿಷಿಯೆನ್ಸಿ ಬ್ಯಾಡ್ಜನ್ನು ಯಾರಿಗೂ ಇದುವರಿಗೂ ಕೊಟ್ಟಿರುವುದಿಲ್ಲ.

24-2-1934ರಲ್ಲಿ ಸಮಸ್ತ ಕಂಪೆನಿಗಳ ರ್‍ಯಾಲಿ ಒಂದನ್ನು ಹಾಸನದಲ್ಲಿ ಏರ್ಪಡಿಸಲಾಯಿತು. ಅಂದಿನ ಕಾರ್ಯಕ್ರಮದಲ್ಲಿ ಎನರೋಲ್‌ಮೆಂಟ್ ಸಮಾರಂಭವೂ ಒಂದು ಅಂಶವಾಗಿತ್ತು. ಅದಾದನಂತರ ಹಾಡುಗಾರಿಕೆಯನ್ನೂ, ಆಟಪಾಟಗಳನ್ನೂ ಅಲ್ಲದೆ ಕ್ಯಾಂಪು ಫೈರನ್ನೂ ಮಾಡಿಸಲಾಯಿತು.

30--8-1924ರಿಂದ 1-9--1934ರವರಿಗೆ ಹಾಸನದಲ್ಲಿ ಕೇವಲ ಉಪಯುಕ್ತವಾದೊಂದು ಟ್ರೈನಿಂಗ್ ಕ್ಯಾಂಪನ್ನು ಏರ್ಪಡಿಸಲಾಯಿತು. ಈ ಸಮಯದಲ್ಲಿ ಹಾಸನದ ಎಲ್ಲಾ ಕಂಪೆನಿಗಳೂ ಮತ್ತು ಉರ್ದು ಗರ್ಲ್ಸ ಸ್ಕೂಲುಗಳ ಮುಖ್ಯೋಪಾಧ್ಯಾಯನಿಯವರುಗಳೂ ಹಾಜರಿದ್ದರು. ಆದರೆ ಹೊಳೇನರಸೀಪುರದ ಮೊದಲನ ಕಂಪೆನಿಯವರಿಗೆ ಹಾಜರಿರಲು ಸಾಧ್ಯವಾಗಲಿಲ್ಲ. ಬೆಂಗಳೂರು ಮುಖ್ಯಠಾಣಿಯಿಂದ ದಯಮಾಡಿಸಿದ್ದ ಅಫಿಷಿಯಲ್ ಟ್ರೈನರ್‌ರವರಾದ ಮಿಸ್ ಪಾಲ್‌ರವರು ಗೈಡರುಗಳಿಗೆ, ಬ್ಲೂಬರ್ಡ್ ಕೆಲಸಗಳಲ್ಲಿಯೂ ಗೈಡ್ ಟೆಂಡರ್‌ಫುಟ್ ಕೆಲಸಗಳಲ್ಲಿಯೂ, ಎರಡನೆ ದರ್ಜೆಯ ಬಾಡ್ಜ಼ ಕೆಲಸಗಳಲ್ಲಿಯೂ ಮತ್ತು ಕಂಪೆನಿ ಮ್ಯಾನೇಜುಮೆಂಟು ಕೆಲಸಗಳಲ್ಲಿಯೂ ಬಹಳ ಉಪಯುಕ್ತವಾದ ತರಪೇತು ಕೊಟ್ಟರು. ಇದಲ್ಲದೆ ಗೈಡುಗಳಿಗೂ, ಬ್ಲೂ ಬರ್ಡ್‌ಗಳಿಗೂ, ಹಾಡುಗಳನ್ನೂ ಆಟಪಾಟಗಳನ್ನೂ ಮತ್ತು ಡ್ರಿಲ್ಲುಗಳನ್ನೂ ಹೇಳಿಕೊಟ್ಟರು. ಇದಾದ ನಂತರ ಲೋಕಲ್ ಅಸೋಸಿಯೇಷನ ಮೆಂಬರುಗಳಿಂದ ಕೂಡಿದ ಈ ಕ್ಯಾಂಪು ಫೈರಿನಿಂದಲೂ, ಹಾಡುಗಾರಿಕೆಯಿಂದಲೂ ಮುಕ್ತಾಯವಾಯಿತು.

ಈ ವರುಷ ನಮ್ಮ ಸ್ಥಳೀಯ ಸಂಸ್ಥೆಯು ಅನೇಕಸಾರಿ ಸಭೆ ಸೇರಿತ್ತು. ಅಲ್ಲದೆ ಸಂಸ್ಥೆಯ ಮೆಂಬರುಗಳೆಲ್ಲರೂ ಗೈಡ್ ಕಾರ್ಯಗಳಲ್ಲಿ ಸಹಾಯ ಮಾಡಲು ಬಹಳ ಉತ್ಸುಕರಾಗಿರುತ್ತಾರೆ. ಡಾಕ್ಟರ್ ಸ್ಮಿತ್‌ರವರು ಈ ಸಂಸ್ಥೆಗೆ ಕಾರ್ಯದರ್ಶಿಗಳಾಗಿದ್ದು, ಈಚೆಗೆ ತುಮಕೂರಿಗೆ ವರ್ಗಾಯಿಸಲ್ಪಟ್ಟಿರುತ್ತಾರೆ. ಇದರ ಪ್ರಯುಕ್ತ ಈ ಸಂಸ್ಥೆಗೆ ಒಂದು ದೊಡ್ಡ ನಷ್ಟವಾಗಿದೆ. ಅಲ್ಲದೆ ಅವರ ಜಾಗವು ಇನ್ನೂ ಭರ್ತಿಯಾಗಿಲ್ಲ.

ಹಿಂದೆ ಹೇಳಿದ ಮಿಾಟಿಂಗುಗಳ ಜೊತೆಗೆ ಈ ವರ್ಷದಲ್ಲಿ ಪ್ರತಿಯೊಂದು ಕಂಪೆನಿಯೂ ಒಂದು ವನವಿಹಾರ ಕೂಟವನ್ನು (Picnic) ಏರ್ಪಡಿಸಿಕೊಂಡಿದ್ದವು. 1934ನೆಯ ಜನವರಿಯಲ್ಲಿ ಹಾಸನದ ಮೊದಲನೆ ಮತ್ತು ಎರಡನೆಯ ಕಂಪೆನಿಯವರು, ರಾಮನಾಥಪುರದಲ್ಲಿ ವನವಿಹಾರ ಕೂಟ ಒಂದನ್ನು ಏರ್ಪಡಿಸಿಕೊಂಡಿದ್ದರು. ಅಲ್ಲದೆ ಹೊಳೇನರಸೀಪುರದ ಕಂಪೆನಿಯವರೂ ಕೂಡ ಅದೇ ರಾಮನಾಥಪುರದಲ್ಲಿಯೇ ಒಂದು ಕೂಟವನ್ನು ಏರ್ಪಡಿಸಿಕೊಂಡಿದ್ದರು.

(ಸಹಿ) ಡಾಕ್ಟರ್ ಎಂ. ಸ್ಪೈಟ್,

14-10-34. ಡಿಸ್ಟ್ರಿಕ್ಟ್ ಕಮಿಾಷನರ್, ಹಾಸನ ಡಿಸ್ಟ್ರಿಕ್ಟು.

ಶಿವಮೊಗ್ಗ ಡಿಸ್ಟ್ರಿಕ್ಟು.

ಶಿವಮೊಗ್ಗದಲ್ಲಿ ಗರ್ಲ್ ಗೈಡ್ ಸಂಸ್ಥೆಯನ್ನು ಸ್ಥಾಪಿಸಿ ಇಂದಿಗೆ 15 ತಿಂಗಳುಗಳಾದವು. ಈ ಸಂಸ್ಥೆಯಲ್ಲಿ ಅಡಗಿರತಕ್ಕ ಜ್ಞಾನಸಂಪತ್ತೂ, ಕಾರ್ಯ ತತ್ಪರತೆಯೂ, ಮತ್ತು ವಿನೋದವು ಎಷ್ಟಿದೆ ಎಂಬುದು ನಮಗೆ ಈಗೀಗ ತಿಳಿಯಬರುತ್ತಿದೆ. ಯಾವ ಹೊಸ ಸಂಘದ ವಿಷಯವಾದರೂ ಸರಿಯೆ, ಪ್ರಾರಂಭದಲ್ಲಿ ಅದರ ಪ್ರಕಾಶವನ್ನು ಹೊರಗೆಡುವುದೂ, ಅದರ ವಿಷಯದಲ್ಲಿ ಉತ್ಸಾಹವನ್ನು ತೋರಿಸುವುದೂ, ಬಹಳ ಸುಲಭ. ಆದರೆ ದಿನಗಳು ಕಳೆದಂತೆಲ್ಲಾ, ಸಂಘದ ಕಾರ್ಯ ಕಲಾಪಗಳನ್ನೆಲ್ಲಾ ಒಂದು ಗೂಡಿಸಿ, ಅದನ್ನೊಂದು ತರವಾದ ಸ್ಥಿತಿಗೆ ತರುವುದು ಮಾತ್ರ ಬಹಳ ಕಷ್ಟ. ಇತರೇ ಡಿಸ್ಟ್ರಿಕ್ಟಿನವರಿಗಿದ್ದಂತೆಯೇ ನಮಗೂ ಇದು ಒಂದು ನೂತನ ವಿಷಯವಾಗಿತ್ತು. ಆದುದರಿಂದಲೇ ಅನುಭವಸ್ತರಾದ ಮುಂದಾಳುಗಳು ದೊರಕುವುದು ದುರ್ಲಭವೆನಿಸಿತ್ತು. ಆದರೆ ಈ ಒಂದು ವರ್ಷದ ಅನುಭವವೂ ನಮಗೆ ಬಹಳ ಪ್ರಯೋಜನಕಾರಿಯಾಗಿರುವುದಲ್ಲದೆ, ಮುಂದಿನ ವರ್ಷದ ಸಂಘದ ಅಭಿವೃದ್ಧಿಗೆ ಬಹಳ ಮಟ್ಟಿಗೆ ಕಾರಣ ಭೂತವಾಗಿದೆ. ಗೈಡ್ ಕಾರ್ಯಕಲಾಪಗಳೆಲ್ಲದರಲ್ಲಿಯೂ, ಪರಸ್ಪರ ಸೌಹಾರ್ದ ದೃಷ್ಟಿಯು ಬೆಳೆಯುತ್ತಿರುವುದು ಒಂದು ಸಂತೋಷ ವಿಷಯ. ಪ್ರಾರಂಭದಿಂದಲೂ ಅನೇಕ ಜನ ಮಹಿಳೆಯರು ಈ ಸಂಘದ ವಿಷಯದಲ್ಲಿ ತಮ್ಮ ಆದರವನ್ನು ತೋರಿಸುತ್ತಿರುವರಲ್ಲದೆ, ಬಹಳ ಮಟ್ಟಿಗೆ ಈ ಚಳವಳಿಗೆ ಸಹಾಯಮಾಡಿರುತ್ತಾರೆ. ಈ ಸ್ಥಳೀಯ ಸಂಸ್ಥೆಯನ್ನು ಹತ್ತು ಜನ ಮೆಂಬರುಗಳಿಂದ ಕೂಡಿ, ಮಿಸೆಸ್ ಈಶ್ವರನ್‌ರವರ ಅಧ್ಯಕ್ಷತೆಯಲ್ಲಿ ಸ್ಥಾಪಿಸಲಾಯಿತು. ಕೇವಲ ಉತ್ಸಾಹಜನಕವಾದ ಬೆಂಬಲಕ್ಕಾಗಿಯೂ, ಕಾರ್ಯದಕ್ಷತೆಯಿಂದ ಕೂಡಿದ ಅವರ ಸಲಹೆಗಳಿಗಾಗಿಯೂ ಮಿಸೆಸ್ ಈಶ್ವರನ್ನರಿಗೆ ನಮ್ಮ ಅನೇಕ ವಂದನೆಗಳು. ಅಲ್ಲದೆ ಸಮಸ್ತಗೃಹಸಂಸ್ಥೆಗಳ ಮೆಂಬರುಗಳಿಗೂ, ಅವರು ಮಾಡಿದ ಸಹಾಯಕ್ಕಾಗಿ ನಾವು ಕೇವಲ ಕೃತಜ್ಞರಾಗಿರುತ್ತೇವೆ. ಆದರೆ ಮುಂಚೆಯಿಂದಲೂ ಕಮಿಟಿ ಮೆಂಬರುಗಳಾಗಿದ್ದವರು ಬೇರೆ ಕಡೆಗಳಿಗೆ ವರ್ಗಾಯಿಸಲ್ಪಟ್ಟಿರುವುದು ವಿಷಾದಕರವಾದೊಂದು ಸಂಗತಿಯಾಗಿದೆ. ಈ ವರ್ಷದ ಕೆಲಸಕಾರ್ಯಗಳಲ್ಲಿ ಸಹಾಯಮಾಡಲು ಅನೇಕ ಜನರಿದ್ದರೆ ಅನುಕೂಲವಾಗಬಹುದೆಂಬ ಉದ್ದೇಶದಿಂದ ಒಂದು ಕಮಿಟಿಯನ್ನು ಏರ್ಪಡಿಸಿರುತ್ತೆ.

1934ನೆಯ ಜುಲೈನಲ್ಲಿ ಎರಡು ಬ್ಲೂಬರ್ಡ್ ಫ್ಲಾಕುಗಳೂ ಇನ್ನೂ ಎರಡು ಗೈಡು ಕಂಪೆನಿಗಳೂ ಏರ್ಪಡಿಸಲ್ಪಟ್ಟವು. ಅಂದರೆ ಶಿವಮೊಗ್ಗದ ಒಟ್ಟು ಸಂಖ್ಯೆಯು 85ಕ್ಕೆ ಮುಟ್ಟಿತು. (*viz* Rangers 9, Guides 45 and Blue-birds 30.) ನಮ್ಮಲ್ಲಿ ಈಗ ಒಂದು ರೇಂಜರ್ ಕಂಪೆನಿಯೂ, ಮೂರು ಗೈಡು ಕಂಪೆನಿಗಳೂ, ಮತ್ತು ಎರಡು ಬ್ಲೂಬರ್ಡ್ ಫ್ಲಾಕುಗಳೂ ಇರುವುವು. ನಾವು ಹೀಗೆಯೇ ಮುಂದುವರಿದು ಚಳುವಳಿಯನ್ನು ವೃದ್ಧಿಯನ್ನೈದಿಸಬಲ್ಲೆವೆಂದು ನಿರೀಕ್ಷಿಸುತ್ತೇವೆ. ಈ ವಿಷಯದಲ್ಲಿ ನಮ್ಮ ನಾಯಕರುಗಳಿಗೆ ನಮ್ಮ ಅನೇಕ ವಂದನೆಗಳು. ಅಲ್ಲದೆ ಸೌಂದರ್ಯದ ಬೀಡೆನಿಸಿದ ಮಲೆನಾಡಿನ ಮಧ್ಯರಾಷ್ಟ್ರಗಳಿಗೆ ಅನೇಕ ಪ್ರವಾಸಗಳನ್ನೂ ವಿಹಾರ ಕೂಟಗಳನ್ನೂ ಏರ್ಪಡಿಸಿದ್ದೆವು. ಇದೂ ಅಲ್ಲದೆ ಹಲವು ವೇಳೆ ನಾಟಕವಾಡುವ ಸಂದರ್ಭಗಳಲ್ಲಿಯೂ ಮತ್ತು ಇತರ ಸಂದರ್ಭಗಳಲ್ಲಿಯೂ ಜನರಿಗೆ ಸಹಾಯಕರಾಗಿ ತನ್ಮೂಲಕ ಜನರ ಸಂತೋಷ ಕಾರ್ಯದಲ್ಲಿ ಭಾಗಿಗಳಾಗಿರುತ್ತೇವೆ.

1933ನೆಯ ಇಸವಿ ನವೆಂಬರ್ ತಿಂಗಳಿನಲ್ಲಿ ಶಿವಮೊಗ್ಗ ಟವನ್ನಿನಲ್ಲಿ ನಡೆದ "ಮೈಸೂರು ಸ್ಟೇಟ್ ಲೇಡೀಸ್ ಕಾನ್ಫರೆನ್ಸ್" ಎಂಬ ಸಂಸ್ಥೆಗೆ ಸಹಾಯಮಾಡುವಂಥ ಅಪೂರ್ವವಾದೊಂದು ಸುಯೋಗವು ನಮಗೆ ಒದಗಿತು. ಈ ಸಮಯದಲ್ಲಿ ಯಾವ ಕೆಲಸವನ್ನೇ ಆಗಲಿ ಮಾಡಲು ಗೈಡುಗಳು ಸಿದ್ಧರಿದ್ದರು. ಸಮ್ಮೇಳನಕ್ಕಾಗಿ ಬಂದ ಪ್ರತಿನಿಧಿಗಳನ್ನು ರೈಲಿನಿಂದ ಇಳಿಸಿ, ಅವರ ಸಾಮಾನುಗಳನ್ನು ಸಾಗಿಸುವುದೂ, ನಂತರ ಸಭೆ ಸೇರುವ ಕಾಲದಲ್ಲಿ ಆಗಮಿಸಿದ ಮಹಿಳೆಯರಿಗೆ ಅವರವರ ಸ್ಥಳಗಳನ್ನು ತೋರಿಸಿ ಕೊಡುವುದೂ, ಅಲ್ಲದೆ ಸಭೆಯಲ್ಲಿಯೂ ಮತ್ತು ಹೊರಗಡೆ ತಮಾಷೆ ನೋಡಲು ಬಂದ ಹುಡುಗರಿಂದಲೂ ಗಲಾಟೆಯಾಗದಂತೆ ನೋಡಿಕೊಳ್ಳುವುದು, ಇವೇ ಮೊದಲಾದುವುಗಳು ಗೈಡುಗಳ ಮುಖ್ಯ ಕೆಲಸವಾಗಿದ್ದವು.

ಸರ್ ಮಿರ್ಜಾ ಇಸ್ಮಾಯಿಲ್ ಸಾಹೇಬರವರು ಶಿವಮೊಗ್ಗದಲ್ಲಿ ಹೊಸದಾಗಿ ಕಟ್ಟಿಸಬೇಕೆಂದಿದ್ದ ಮ್ಯಾಗನ್ ಹಾಸ್ಪಿಟಲ್ (Mc.-Gann Hospital) ಕಟ್ಟಡಗಳ ಶಂಕುಸ್ಥಾಪನೋತ್ಸವದಲ್ಲಿ ಗೈಡುಗಳೂ ಸಹ ಆಹ್ವಾನಿಸಲ್ಪಟ್ಟಿದ್ದರು. ಇದಲ್ಲದೆ, ಆಹ್ವಾನಿಸಲ್ಪಟ್ಟ ಮಹಿಳೆಯರನ್ನು ಅವರವರ ಸ್ಥಾನಗಳಲ್ಲಿ

ಕೂಡಿಸುವ ಕೆಲಸವೂ ಈ ಗೈಡುಗಳಿಗೆ ನೇಮಿಸಲ್ಪಟ್ಟಿತ್ತು. ಸುಮಾರು 20 ಜನ ಗೈಡುಗಳು ಆಹ್ವಾನವನ್ನು ಸ್ವೀಕರಿಸಿ ಬಂದುದಲ್ಲದೆ ಕಾರ್ಯವನ್ನು ನೆರವೇರಿಸುವದರಲ್ಲಿಯೂ ಸಹಾಯಕರಾಗಿದ್ದರು.

ಈ ವರ್ಷ ಸೆಪ್ಟೆಂಬರ್ ಮಾಹೆಯಲ್ಲಿ ಒಂದುವಾರ ಟ್ರೈನಿಂಗಿಗೋಸ್ಕರವಾಗಿ ಏರ್ಪಡಿಸಲಾಯಿತು. ಈ ಕಾರ್ಯವನ್ನು ಸಾಂಗವಾಗಿ ನೆರವೇರಿಸುವ ಸಲುವಾಗಿಯೇ ಒಂದು ಫಂಡು ಏರ್ಪಾಡು ಮಾಡಲಾಯಿತು. ಇದರ ಬಗ್ಗೆ ಗೈಡುಗಳೂ, ಬ್ಲೂಬರ್ಡ್‌ಗಳೂ ಸೇರಿ ಒಂದು ಸಂಗೀತ ಕಛೇರಿಯನ್ನು (Concert) ಟೌನ್ ಹಾಲಿನಲ್ಲಿ ಸೇರಿಸಬೇಕೆಂದು ನಿಶ್ಚಯ ಮಾಡಲಾಯಿತು. ನಡೆದ ಅನೇಕ ಅಂಶಗಳು ಸಭೆಯಲ್ಲಿ ನೆರೆದ ಮಹಿಳೆಯರೆಲ್ಲರಿಗೂ ಮನೋರಂಜಕವಾಗಿತ್ತು. ಗೈಡುಗಳೂ ಸಹ ಸಂತೋಷದ ಸವಿಯನ್ನುಂಡರು.

ನಾವು ಏರ್ಪಡಿಸಿದ್ದ ಟ್ರೈನಿಂಗ್ ವಾರವು ಸಮಾಪ್ತಿಯಾಯಿತು. ಇತರೇ ಊರುಗಳಿಂದ ಬಂದ ಪ್ರತಿನಿಧಿಗಳೂ ಸಹ ಶೀಘ್ರದಲ್ಲಿಯೇ ಫ್ಲಾಕುಗಳನ್ನೂ, ಕಂಪೆನಿಗಳನ್ನೂ ಏರ್ಪಡಿಸುವರೆಂದು ನಮ್ಮ ನಿರೀಕ್ಷೆ. ಈಗಾಗಲೇ ಹಲವು ಊರುಗಳಲ್ಲಿ ಪ್ರಾರಂಭದ ಸೂಚನೆಗಳು ಅನೇಕವಾಗಿ ಕಂಡುಬರುತ್ತಿವೆ. ಆದ್ದರಿಂದ ನಮ್ಮ ಮುಂದಿನ ವರ್ಷದ ವರದಿಯಲ್ಲಿ ಹೆಚ್ಚು ಕಾರ್ಯಕಲಾಪಗಳು ಕಂಡುಬರಬಹುದೆಂದೂ, ಶಿವಮೊಗ್ಗ ಟವರ್ ಕಂಪೆನಿಗಳ ಅಭಿವೃದ್ಧಿಯ ವಿಚಾರದಲ್ಲಿ ಹೆಚ್ಚು ಬರೆಯಲು ಅವಕಾಶವಾಗಬಹುದೆಂದೂ ನಮ್ಮ ಅಭಿಲಾಷೆ.

(Sd) ಮಿಸ್ ಕೆ. ಎಮ್. ಪುರಿ,

20-11-1934. ಡಿಸ್ಟ್ರಿಕ್ಟ್ ಕಮಿಷನರ್, ಶಿವಮೊಗ್ಗ ಡಿಸ್ಟ್ರಿಕ್ಟು.

1935–36ನೆಯ ಸಾಲಿನ ಎಕ್ಸಿಕ್ಯೂಟಿವ್ ಕೌನ್ಸಿಲ್.

ಶ್ರೀ ಎಸ್. ನಂಜಮ್ಮ (Sri. S. Nanjamma).
ಮಿಸೆಸ್ ರಾಘವಾಚಾರಿ (Mrs. Raghavachari).
ಮಿಸೆಸ್ ಅನಂತರಾಮನ್ (Mrs. Anantaraman).
ಡಾಕ್ಟರ್ (ಮಿಸ್) ಆರ್‌ಬುಕರ್ಕ್ (Dr. (Miss) Albuquerque).
ಮಿಸೆಸ್ ಆರ್. ಎ. ಶ್ರೀನಿವಾಸಯ್ಯಂಗಾರ್ (Mrs. R. A. Sreenivasiengar).
ಮಿಸೆಸ್ ಶಂಕರನಾರಾಯಣರಾವ್ (Mrs. Sankaranarayana Rao).
ಮಿಸ್ ತಾಜ್ ಮಿರ್ಜಾ ಇಸ್ಮಾಯಿಲ್ (Miss Taj Mirza Ismail).
ಮಿಸೆಸ್ ಕೆ. ಡಿ. ರುಕ್ಮಿಣಿಯಮ್ಮ (Mrs. K. D. Rukmaniyamma).
ಮಿಸೆಸ್ ಸೊರಾಬ್ (Sorab).
ಮಿಸ್ ತಾಂಸನ್ (Miss Thompson).
ಮಿಸೆಸ್ ರುಕ್ಮಿಣಿಯಮ್ಮಾಳ್ (Mrs. Rukmaniyammal).

1932ನೆಯ ಇಸವಿಯ ಅಕ್ಟೋಬರ್ 25ನೆಯ ತಾರೀಖಿನ ಲಾಗಾಯ್ತು 1933ನೆಯ ಇಸವಿಯ ಜೂನ್ 30ನೆಯ ತಾರೀಖಿನ ಅಂತ್ಯದವರೆಗಿನ "ಗರ್ಲ್ ಗೈಡ್" ಅಸೋಸಿಯೇಷನ್ನಿನ ಲೆಖ್ಖ ಪತ್ರಗಳ ವಿಚಾರವಾಗಿ ಆಡಿಟರ್‌ರವರ ವರದಿ.

ಈ ಕೆಳಗಿನ ಲೆಖ್ಖದ ಪುಸ್ತಕಗಳನ್ನು ಗೌರವ ಕಾರ್ಯದರ್ಶಿಗಳು ಬರೆದಿಟ್ಟಿರುತ್ತಾರೆ.

1. ಕ್ಯಾಷ್ ಬುಕ್ಕು.
2. ಸೀರೆ, ಪುಸ್ತಕ ಮತ್ತು ಇತರ ಸಾಮಾನುಗಳ ಮಾರಾಟದ ಪುಸ್ತಕ.
3. ಸೀರೆ ಮತ್ತು ಪುಸ್ತಕಗಳ ಸ್ಟಾಕ್ ಮತ್ತು ಇಷ್ಯೂ ಪುಸ್ತಕ (Stock and Issue Book).
4. ಕಾರ್ಯಕ್ರಮ ವರದಿ ಪುಸ್ತಕ (Minute Book).

ಈ ಲೆಖ್ಖವು 25–10–1932ರಿಂದ ಆರಂಭವಾಗಿ, ತೃಪ್ತಿಕರವಾಗಿ ಇಡಲ್ಪಟ್ಟಿದೆ. ಈ ಅಸೋಸಿಯೇಷನ್ ಹೊರಗಿನವರ ಮತ್ತಾರ ಸಹಾಯವನ್ನೂ ಪಡೆಯದೆ ಸರ್ಕಾರದ ಸಹಾಯದಿಂದ ಮಾತ್ರವೇ ನಡೆಯುತ್ತಿದೆ. ಈ ಅಸೋಸಿಯೇಷನ್ನಿನ ಹಣವು ಎಲ್ಲಿಯೂ ಡಿಪಾಜಿಟ್ಟಾಗಿಡಲ್ಪಟ್ಟಿಲ್ಲ ; ಹಣವನ್ನು ಗೌರ್ನಮೆಂಟ್ ಸೇವಿಂಗ್ಸ್ ಬ್ಯಾಂಕಿನಲ್ಲಾಗಲೀ, ಮೈಸೂರು ಬ್ಯಾಂಕಿನಲ್ಲಿಯಾಗಲೀ ಡಿಪಾಜಿಟ್ಟಾಗಿಡುವುದು ಸೂಕ್ತವೆಂದು ತೋರುತ್ತದೆ. ಖರ್ಚಿಗೆ ಬೇಕಾದಾಗ ಅಲ್ಲಿಂದ ವಾಪಸ್ಸು ತೆಗೆದುಕೊಳ್ಳಬಹುದು.

ಇದರ ಜೊತೆಯಲ್ಲಿ ಎರಡು ತಃಖ್ತೆಗಳನ್ನು ಅಂದರೆ 1933ನೆಯ ಜೂನ್ ಆಖೈರಿನವರಿಗಿನ (1) ಜಮಾಖರ್ಚು ತಃಖ್ತೆ ಮತ್ತು (2) ಆಸ್ತಿ ಮತ್ತು ಜವಾಬ್ದಾರಿ ತಃಖ್ತೆಗಳನ್ನು ಲಗತ್ತಿಸಿದೆ.

ಬೆಂಗಳೂರು, (ಸಹಿ) **B. K.** ಶ್ರೀನಿವಾಸ ಐಯ್ಯಂಗಾರ್,
ತಾರೀಖು 24–7–1933. ಆಡಿಟರ್.

ತಃಖ್ತೆ 1.

1932ನೆಯ ಇಸವಿ ಅಕ್ಟೋಬರ್ 25ನೆಯ ತಾರೀಖಿನ ಲಾಗಾಯ್ತು 1933ನೆಯ ಇಸವಿ ಜೂನ್ 30ನೆಯ ತಾರೀಖಿನವರೆಗೆ ಗರ್ಲ್ ಗೈಡ್ ಅಸೋಸಿಯೇಷನ್ನಿನ ಜಮಾಖರ್ಚು ತಪಶೀಲು ತಃಖ್ತೆ.

ಜಮಾ	ರೂ.	ಆ.	ಪೈ	ಖರ್ಚು	ರೂ.	ಆ.	ಪೈ
1. ಸರ್ಕಾರದಿಂದ ಬಂದ ಗ್ರ್ಯಾಂಟು ಹಣ (Grant)	2,000	0	0	1. ಸೀರೆಗಳಿಗೋಸ್ಕರ	546	4	0
2. ಮಾರಾಟದಿಂದ ಬಂದ ಆದಾಯ :—				2. ಪುಸ್ತಕಗಳಿಗೆ	420	4	0
(1) ಸೀರೆಗಳ ಮಾರಾಟದಿಂದ ...	620	0	0	3. ಪ್ರಯಾಣದ ಮತ್ತು ಕ್ಯಾಂಪ್ ಖರ್ಚು ...	308	13	0
(2) ಪುಸ್ತಕಗಳ ಬಿಕರಿಯಿಂದ ...	50	0	0	4. ಗರ್ಲ್ ಗೈಡುಗಳಿಗೆ ಬೇಕಾದ ಸಾಮಾನುಗಳು ಅಂದರೆ ಬ್ರೋಚಸ್ ಮತ್ತು ಇತರ ಸಾಮಾನುಗಳಿಗೆ	260	2	0
(3) ಇತರ ಬಾಬುಗಳಿಂದ ...	70	3	6	5. ಆಫೀಸ್ ಫರ್ನೀಚರ್	186	14	0
				6. ಸಿಬ್ಬಂದಿ	142	8	0
				7. ಪ್ರಿಂಟಿಂಗ್ ಮತ್ತು ಸ್ಟೇಷನರಿ ...	68	12	0
				8. ಫೋಟೋ	20	0	0
				9. ಕೂಲಿ, ಜಟಕಾ ಬಾಡಿಗೆ ಮತ್ತು ಇತರ ಖರ್ಚು	14	1	10
				10. ಅಂಚೆ ವೆಚ್ಚ	12	15	0
				11. ಮಾಸ ಪತ್ರಿಕೆಗಳಿಗೆ ಚಂದಾ	2	5	0
				12. ಪ್ರಚಾರದ ಖರ್ಚು (Publication) ...	1	8	0
					1,984	7	1
				ನಗದು	755	12	5
ಜುಮ್ಲಾ ರೂ. ...	2,740	3	6	ಜುಮ್ಲಾ ರೂ. ...	2,740	3	6

ತಃಖ್ತೆ 2.

ಗರ್ಲ್ಸ ಗೈಡ್ ಅಸೋಸಿಯೇಷನ್ನಿನ, 30–6–1933ನೆಯ ತಾರೀಖಿನ ದಿವಸ ಇದ್ದ ಬ್ಯಾಲೆನ್ಸ ಷೀಟ್.

ಜವಾಬ್ದಾರಿ (Liabilities)	ರೂ.	ಆ.	ಪೈ	ಆಸ್ತಿ (Assets)	ರೂ.	ಆ.	ಪೈ
				ಸಿಲ್ಕು ;—			
ಸೀರೆಗಳ ಬಾಬ್ತು ಮೆಸರ್ಸ ಚಿಕ್ಕಚೌಡಪ್ಪ ಅಂಡ್ ಸನ್ಸ ಇವರಿಗೆ ಸಲ್ಲತಕ್ಕ ಹಣ... ...	323	13	0	(1) ಪುಸ್ತಕಗಳು	200	0	0
				(2) ಸೀರೆಗಳು	172	0	0
ಪುಸ್ತಕಗಳ ಸಲುವಾಗಿ ಮದ್ರಾಸ್ ಗೈಡ್‌ಗಳಿಗೆ ಸಲ್ಲಬೇಕಾದ್ದು	14	9	0	(3) ಇತರ ಸಾಮಾನುಗಳು	55	0	0
				ಫರ್ನೀಚರ್	186	14	0
ಸ್ಟೇಷನರಿ ಸಂಬಂಧವಾಗಿ ಲಂಡರ್ ಕಂಪೆನಿಗೆ ಕೊಡಬೇಕಾದ್ದು	1	11	6	ಸಾಲದ (Credit) ವ್ಯಾಪಾರದಿಂದ ವಸೂಲಾಗತಕ್ಕ ಮೊಬಲಗು	128	11	0
ದೇಣಿಯ (Liabilities) ಮೇಲೆ ಹೆಚ್ಚಿಗೆ ಲೇಣಿ (Assets)..	1,158	3	11	ಗೌರವ ಕಾರ್ಯದರ್ಶಿಗಳ ಬಳಿ ಇರುವ ನಗದು ಹಣ	755	12	5
	1,498	5	5		1,498	5	5

ತಾ॥ 24–7–1933.

(ಸಹಿ) **B. K.** ಶ್ರೀನಿವಾಸ ಐಯ್ಯಂಗಾರ್.

ತಃಖ್ತೆ 1.—ಮುಗಿದುದು.

1-7-1933ರಿಂದ 30-6-34ರ ವರಿಗಿನ ಗರ್ಲ್ ಗೈಡ್ ಅಸೋಸಿಯೇಷನ್ನಿನ ಜಮಾ ಖರ್ಚು ಲೆಖ್ಖ.

ಜಮಾ	ರೂ.	ಆ.	ಪೈ	ಖರ್ಚು	ರೂ.	ಆ.	ಪೈ
1. ಸರ್ಕಾರದ ಗ್ರಾಂಟು ...	2,800	0	0	1. ಸೀರೆಗಳನ್ನು ಕೊಂಡದ್ದು ...	1,438	8	3
2. ಸೀರೆ, ಪುಸ್ತಕ, ಬ್ರೋಚ್ ಮುಂತಾದವುಗಳ ಮಾರಾಟದಿಂದ ಬಂದ ಹಣ ...	1,695	14	6	2. ಪುಸ್ತಕಗಳನ್ನು ಕೊಂಡದ್ದು ...	317	6	0
3. ಹಿಂದಿನ ಸಿಲ್ಕು ...	755	12 (a)	5	3. ಗರ್ಲ್ ಗೈಡ್‌ಗಳಿಗೆ ಬೇಕಾದ ಸಾಮಾನುಗಳನ್ನು ಕೊಂಡದ್ದು ...	671	6	0
(a) ಇದು ಗರ್ಲ್ ಗೈಡರಿಗೆ ಬೇಕಾದ ಸಾಮಾನುಗಳನ್ನು ಕೊಳ್ಳಲು ಉಪಯೋಗಿಸಲ್ಪಟ್ಟಿತು.				4. ಮೆಂಬರುಗಳ ಪ್ರಯಾಣ ಖರ್ಚು ...	604	2	0
				5. ಆಫೀಸಿನ ಸಾಮಾನು ...	540	13	0
				6. ಸಿಬ್ಬಂದಿ ಖರ್ಚು ...	319	0	0
				7. ಡಿಸ್ಟ್ರಿಕ್ಟು ಅಸೋಸಿಯೇಷನ್‌ಗಳಿಗೆ ಕೊಟ್ಟ ಗ್ರಾಂಟು ...	316	15	0
				8. ಸ್ಟೇಷನರಿ ಮತ್ತು ಮುದ್ರಣದ ಖರ್ಚು ...	141	5	0
				9. ಗರ್ಲ್ ಗೈಡಿಂಗ್ ರೂಲ್ಸನ್ನು ತರ್ಜುಮೆ ಮಾಡಿದವರಿಗೆ ಕೊಟ್ಟಿದ್ದು	100	0	0
				10. ಆಡಿಟರಿಗೆ ಕೊಟ್ಟದ್ದು ...	25	0	0
				11. ಇತರ ಖರ್ಚು ... (ಸ್ಟಾಂಪು, ಪ್ಯಾಕಿಂಗ್ ಚಾರ್ಜು ಇತ್ಯಾದಿ) ...	55	10	0
				12. ಪತ್ರಿಕೆಗಳ ಚಂದಾ ...	16	3	0
	5,251	10	11		4,546	5	0
				* ಸಿಲ್ಕು	705	5	11
	5,251	10	11		5,251	10	11

* ಹಾಲಿ ಉಳಿದ ಹಣದ ವಿಚಾರವಾಗಿ ತಪ್ಸೀಲು :—

	ರೂ.	ಆ.	ಪೈ
1. ಚೀಫ್ ಕಮಿಷನರ್ ಹೆಸರಿನಲ್ಲಿ ಸ್ಟೇಟ್ ಹುಜೂರ್ ಟ್ರೆಜರಿಯಲ್ಲಿ S. B. No. 15651	40	13	0
2. ಗೌರವ ಕಾರ್ಯದರ್ಶಿಯ ಹೆಸರಿನಲ್ಲಿ ಸ್ಟೇಟ್ ಹುಜೂರ್ ಟ್ರೆಜರಿಯಲ್ಲಿ S. B. No. 15748	375	12	0
3. ಗೌರವಕಾರ್ಯದರ್ಶಿಯ ಹತ್ತಿರ	288	12	11
ಜುಮ್ಲಾ ...	705	5	11

ತಃಖ್ತೆ 2.—ಮುಗಿದುದು.

30–6–1934ರಲ್ಲಿ ಗರ್ಲ್ ಗೈಡ್ ಅಸೋಸಿಯೇಷನ್ನಿನ ಬ್ಯಾಲೆನ್ಸ್ ಷೀಟು.

ಜವಾಬ್ದಾರಿ

	ರೂ.	ಅ.	ಪೈ
1. ಮ॥ ರಾ॥ ಚಿಕ್ಕಚೌಡೈಯ್ಯನವರಿಗೆ ಕೊಡಬೇಕಾದದ್ದು ...	27	9	0
2. ಮ॥ ರಾ॥ ಗುರುಲಿಂಗಪ್ಪನವರಿಗೆ ಕೊಡಬೇಕಾದದ್ದು —	112	2	0
3. ಮೆಸರ್ಸ್ ಬಾರ್ಟನ್ ಅಂಡ್ ಕಂಪೆನಿಗೆ ಕೊಡಬೇಕಾದದ್ದು ...	50	0	0
4. ಮೆಸರ್ಸ್ ಹಿಗ್ಗಿನ್ ಬಾತಮ್ಸ್ ಕಂಪೆನಿಗೆ ಕೊಡಬೇಕಾದದ್ದು ...	55	0	0
5. ಮದ್ರಾಸ್ ಅಂಗಡಿಗೆ ಕೊಡಬೇಕಾದದ್ದು ...	30	14	0
6. ಜವಾಬ್ದಾರಿಗಿಂತ ಹೆಚ್ಚಿರುವ ಆಸ್ತಿ ...	2,057	12	11
ಜುಮ್ಲಾ ...	2,333	5	11

ಆಸ್ತಿ

	ರೂ.	ಅ.	ಪೈ
1. ಸ್ಟಾಕ್ :—			
ಪುಸ್ತಕಗಳು ...	250	0	0
ಸೀರೆ ಮತ್ತು ಬಟ್ಟೆಗಳು ...	338	0	0
ಇತರ ಸಾಮಾನುಗಳು ...	150	0	0
2. ಮರದ ಸಾಮಾನುಗಳು ಮತ್ತು ಟೈಪುರೈಟರ್ ...	727	0	0
3. ಸಾಲ ಬರಬೇಕಾದ್ದು ...	163	0	0
*4. ಚೀಫ್ ಕಮಿಷನರ ಹತ್ತಿರದಲ್ಲೂ, ಗೌರವ ಕಾರ್ಯದರ್ಶಿಯ ಹತ್ತಿರದಲ್ಲೂ ಇರುವ ಸಿಲ್ಕು ...	705	5	11
ಜುಮ್ಲಾ ...	2,333	5	11

* ಹಾಲಿ ಸಿಲ್ಕು ಉಳಿದ ಹಣದ ವಿಚಾರವಾಗಿ ತಪಶೀಲು :—

	ರೂ.	ಅ.	ಪೈ
1. ಚೀಫ್ ಕಮಿಷನರ ಹೆಸರಿನಲ್ಲಿ ಸ್ಟೇಟ್ ಹುಜೂರ್ ಟ್ರೆಜರಿಯಲ್ಲಿ S. B. No. 15651	40	13	0
2. ಗೌರವ ಕಾರ್ಯದರ್ಶಿಯ ಹೆಸರಿನಲ್ಲಿ ಸ್ಟೇಟ್ ಹುಜೂರ್ ಟ್ರೆಜರಿಯಲ್ಲಿ S. B. No. 15748	375	12	0
3. ಗೌರವ ಕಾರ್ಯದರ್ಶಿಯ ಹತ್ತಿರ	288	12	11
ಜುಮ್ಲಾ ...	705	5	11

WD 24—GPB—125—8-11-35